ಸಂಪುಟ : 8 ಸಂಚಿಕೆ : 215 ಪುಟ : 4 ಬೆಲೆ : 3.00 ರವಿವಾರ ಅಕ್ಟೋಬರ್ 01, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 215 Pages : 4 Price : 3.00 Sunday October 01, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ಜನತಾ ದರ್ಶನ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಚಾಲನೆ

# ಸ್ವೀಕೃತ ಅಹವಾಲುಗಳಿಗೆ ಕಾಲಮಿತಿಯೊಳಗೆ ಪರಿಹಾರ



■ವಿಜಯಸಾಕ್ಷಿ ಸುದ್ದಿ, ಗದಗ

ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಪರಿಹಾರ ಕಂಡುಕೊಳ್ಳಲು ಹಾಗೂ ಜಿಡ್ಡುಗಟ್ಟಿದ ಆಡಳಿತವನ್ನು ಸರಿದಾರಿಗೆ ತರುವ ಕಾರ್ಯ ಮಾಡುವ ಸದುದ್ದೇಶದೊಂದಿಗೆ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಹೇಳಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿ ಶನಿವಾರ ಆಯೋಜಿಸಲಾದ ಜಿಲ್ಲಾ ಮಟ್ಟದ ಜನತಾ ದರ್ಶನ ಪ್ರಥಮ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಜನಸಾಮಾನ್ಯರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರಿಗೆ ಅಹವಾಲುಗಳನ್ನು ಸಲ್ಲಿಸುತ್ತಿದ್ದರು. ರಾಜ್ಯದ ವಿವಿಧೆಡೆಯಿಂದ ಅಗಮಿಸುವ ಜನಸಾಮಾನ್ಯರು ವಿನಾಕಾರಣ ಬೆಂಗಳೂರಿಗೆ ಅಲೆದಾಡಬೇಕಿತ್ತು. ಇದನ್ನು ತಪ್ಪಿಸಿ ಜಿಲ್ಲಾ ಹಂತದಲ್ಲಿಯೇ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜನತಾ ದರ್ಶನ ಕಾರ್ಯಕ್ರಮ ಆಯೋಜಿಸುವ ಮೂಲಕ ಜನಸಾಮಾನ್ಯರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುವ ಕಾರ್ಯ ಮಾಡುವ ಉದ್ದೇಶದಿಂದ ಜನತಾ ದರ್ಶನವನ್ನು ಆಯೋಜಿಸಲಾಗಿದೆ.

**ಶತಾಯುಷಿಗೆ ಮಂಜೂರಾತಿ ಆದೇಶ**

ಕಾರ್ಯಕ್ರಮದ ಉದ್ಘಾಟನೆ ನಂತರ ಬೆಟಗೇರಿಯ ಹೆಲ್ತ್ ಕ್ಯಾಂಪ್ ನಿವಾಸಿ, ಶತಾಯುಷಿ ಕಮಲಾಬಾಯಿ ಜೋಶಿಯವರು ಪ್ರಥಮ ಅಹವಾಲನ್ನು ಸಚಿವರಿಗೆ ಸಲ್ಲಿಸಿ, ತಮಗೆ ಆಧಾರ್ ಕಾರ್ಡ್ ಹಾಗೂ ಮಾಸಾಶನ ಮಂಜೂರಾತಿ ಮಾಡುವಂತೆ ಕೋರಿದರು. ಸಚಿವರು ಉದ್ಘಾಟನಾ ಕಾರ್ಯಕ್ರಮದ ಕೊನೆಯಲ್ಲಿ ಶತಾಯುಷಿ ಕಮಲಾಬಾಯಿ ಜೋಶಿಯವರಿಗೆ ಮಂಜೂರಾತಿ ಆದೇಶ ನೀಡುವ ಮೂಲಕ ನೆರೆದ ಜನಸ್ತೋಮದ ಮೆಚ್ಚುಗೆಗೆ ಪಾತ್ರರಾದರು.

ಜನಸಾಮಾನ್ಯರ ಸಣ್ಣಪುಟ್ಟ ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಲು ಅವಕಾಶವಿದ್ದು, ಆಡಳಿತ ವರ್ಗ ಈ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಬೇಕು. ಸರ್ಕಾರದ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸುವ ನಿಟ್ಟಿನಲ್ಲಿ ಆಡಳಿತ ವರ್ಗ ಜಡತ್ವದಿಂದ ಹೊರಬಂದು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಬೇಕು. ಜನತಾ ದರ್ಶನದಲ್ಲಿ ಸ್ವೀಕರಿಸುವ ಅಹವಾಲುಗಳಿಗೆ ಕಾಲಮಿತಿಯೊಳಗೆ ಪರಿಹಾರ ನೀಡಬೇಕು ಎಂದರು.

ಜನಸಾಮಾನ್ಯರು ಯಾವುದೇ ಹಂಗು, ಭಿಡೆಯಿಲ್ಲದೇ ತಮ್ಮ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಬೇಕು. ಸಮಸ್ಯೆಗಳು ಕಾನೂನಾತ್ಮಕ ಚೌಕಟ್ಟಿನಲ್ಲಿದ್ದಲ್ಲಿ, ಸ್ಥಳದಲ್ಲೇ ಪರಿಹಾರ ನೀಡಲು ಅಧಿಕಾರಿ ವರ್ಗ ಮುಂದಾಗಬೇಕು. ಪಾರದರ್ಶಕವಾಗಿ ಸಾರ್ವಜನಿಕರ ಸಮಸ್ಯೆಗಳ ಪರಿಹಾರ ಹಾಗೂ



> ಸರ್ಕಾರದ ಸೌಲಭ್ಯಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸುಲಭವಾಗಿ ಲಭ್ಯವಾಗಬೇಕು ಎಂಬುದು ಸರ್ಕಾರದ ನಿರ್ಧಾರ. ಆಡಳಿತದಲ್ಲಿ ಶೋಷಣೆಮುಕ್ತ ಕಾರ್ಯ ಜಾರಿಯಾಗಬೇಕು. ಬ್ರಿಟಿಷ್ ಆಡಳಿತ ದೂರವಾಗಿದೆ. ಆ ಮನಸ್ಥಿತಿಯಿಂದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಹೊರಬರಬೇಕು. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸಹಾನುಭೂತಿಯಿಂದ ಸ್ಪಂದಿಸುವ ಕಾರ್ಯ ಮಾಡಬೇಕು.
>
> **– ಡಾ.ಎಚ್.ಕೆ ಪಾಟೀಲ.**
>
> ಗದಗ ಜಿಲ್ಲಾ ಉಸ್ತುವಾರಿ ಸಚಿವರು.

ನಿರ್ಣಯ ಈ ಜನತಾ ದರ್ಶನದ ಮೂಲಕ ಆಗಬೇಕು ಎಂದರು.

ಇಲ್ಲಿ ಮೂರು ಹಂತಗಳಲ್ಲಿ ಸಾರ್ವಜನಿಕರ ಅಹವಾಲುಗಳು ಸ್ವೀಕೃತವಾಗುತ್ತವೆ. ಮುಖ್ಯಮಂತ್ರಿಗಳ ಹಾಗೂ ▸▸3ನೇ ಪುಟಕ್ಕೆ

### ಜನತಾ ದರ್ಶನದಲ್ಲಿ ಶಾಂತಚಿತ್ತದಿಂದ ಸಮಸ್ಯೆ ಆಲಿಸಿ, ಪರಿಹಾರ ಸೂಚಿಸಿದ ಸಚಿವ ಎಚ್.ಕೆ ಪಾಟೀಲ

# ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ



■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾಡಳಿತ ಭವನದಲ್ಲಿ ಶನಿವಾರ ಜರುಗಿದ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಅಪಾರ ಸಾರ್ವಜನಿಕರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲರನ್ನು ಭೇಟಿ ಮಾಡಿ, ಅಹವಾಲುಗಳನ್ನು ಸಲ್ಲಿಸಿದರು. ಸಚಿವರಾದ ಎಚ್.ಕೆ ಪಾಟೀಲ ಅತ್ಯಂತ ಸಂಯಮದಿಂದಲೇ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ, ಸಾಧ್ಯವಾದಷ್ಟು ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸಿದರಲ್ಲದೆ, ಬಾಕಿ ಸಮಸ್ಯೆಗಳ ಪರಿಹಾರಕ್ಕಾಗಿ

> ಗರ್ಭಿಣಿ ಮಹಿಳೆ ಪಡಿತರ ಚೀಟಿ ಹೊಂದದೇ ಇರುವದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲು ನಿರಾಕರಿಸುತ್ತಿರುವ ಕುರಿತ ಅಹವಾಲಿಗೆ ಸಿಡಿಮಿಡಿಗೊಂಡ ಸಚಿವರು ಗರ್ಭಿಣಿ ಮಹಿಳೆಯರು ಪಡಿತರ ಚೀಟಿ ಹೊಂದದೇ ಇದ್ದರೂ ಸಹ ಅವರಿಗೆ ಜಿಮ್ಸ್ ಸೇರಿದಂತೆ ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚನೆ ನೀಡಿದರು. ಆಶ್ರಯಮನೆ, ಜಲಜೀವನ ಮಿಷನ್, ಪಹಣಿ ತಿದ್ದುಪಡಿ, ವ್ಯಾಸಂಗ, ಉಚಿತ ಲ್ಯಾಪಟಾಪ್, ಆರೋಗ್ಯ ಸಂಬಂಧಿತ ಕಾಯಿಲೆಗಳಿಗೆ ಹೆಚ್ಚಿನ ಚಿಕಿತ್ಸೆಗೆ ನೆರವು ಹೀಗೆ ಸಾರ್ವಜನಿಕರ ಹಲವಾರು ಸಮಸ್ಯೆಗಳನ್ನು ಸಚಿವ ಎಚ್.ಕೆ ಪಾಟೀಲ ಶಾಂತಚಿತ್ತದಿಂದಲೇ ಆಲಿಸಿ, ಪರಿಹಾರ ಸೂಚಿಸಿದರು.

ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಗಡುವು ನೀಡಿ ಸಾರ್ವಜನಿಕರ ಸಮಸ್ಯೆಗಳನ್ನು ನಿವಾರಿಸಲು ಸೂಚನೆ ನೀಡಿದರು.


ಗದಗ ನಗರದ ಗಂಗವ್ವ ವಾಲ್ಮೀಕಿ ಅವರು ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಸಹಾಯಧನ ಕುರಿತು ಸಲ್ಲಿಸಿದ ಅಹವಾಲಿಗೆ ಸ್ಪಂದಿಸಿದ ಸಚಿವರು, ತಹಸೀಲ್ದಾರರಲ್ಲಿ ಇಂದೇ ಮಂಜೂರಾತಿ ಪತ್ರ ನೀಡುವಂತೆ ಸೂಚಿಸಿದರು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ 20 ಸಾವಿರ ರೂ.ಗಳ ಸಹಾಯ ಧನದ ಮಂಜೂರಾತಿ ಆದೇಶ ಪ್ರತಿಯನ್ನು ಗಂಗವ್ವ ವಾಲ್ಮೀಕಿ ಅವರಿಗೆ ▸▸3 ನೇ ಪುಟಕ್ಕೆ

# ನಾಳೆ ಮಹಾತ್ಮ ಗಾಂಧೀಜಿ ಜಯಂತಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 154ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಅಕ್ಟೋಬರ್ 2 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.



ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ಗಾಂಧೀಜಿಯವರ ಜೀವನ ಹಾಗೂ ಅಹಿಂಸಾ ತತ್ವಗಳ ಕುರಿತು ಹುಲಕೋಟಿ ಸಹಕಾರಿ ರೇಡಿಯೋ ನಿರ್ದೇಶಕರಾದ ಜೆ.ಕೆ. ಜಮಾದಾರ ಅವರು ಉಪನ್ಯಾಸ ನೀಡಲಿದ್ದಾರೆ.

ಗಾಂಧೀಜಿಯವರ ಪ್ರಿಯ ಭಜನೆಯನ್ನು ಸಂಗೀತ ಕಲಾವಿದರು ನಡೆಸಿಕೊಡುವರು ಹಾಗೂ ವಿದ್ಯಾರ್ಥಿಗಳಿಗೆ ಮಹಾತ್ಮಾಗಾಂಧೀಜಿ ಕುರಿತು ಏರ್ಪಡಿಸಲಾದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುವುದು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಬ.ಮಡ್ಲೂರ ಸರ್ವರಿಗೂ ಸ್ವಾಗತ ಕೋರಿದ್ದಾರೆ.

# ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 1 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂಬರ್. 34, 35 ರಲ್ಲಿ ಸಚ್ಚಿದಾನಂದ ಮಠ, ಈಶ್ವರ ಗುಡಿ ಲೈನ್ 1ನೇ ಕ್ರಾಸ್, ದೊಡ್ಡಮನಿ ಅವರ ಲೈನ್, ಸಿದ್ದು ಪಾಟೀಲರ ಲೈನ್, ಆದರ್ಶ ನಗರ, ವಾರ್ಡ್ ನಂಬರ್. 8,9.10 ರಲ್ಲಿ ಕಬಾಡಿ ಅವರ ಲೈನ್, ಶರಣಬಸವೇಶ್ವರ ಲೈನ್, ಮಲ್ಲಾರಾಯನ ಕಟ್ಟಿ, ಕಾಟಿಗಾರ್ ಓಣಿ, ಪಿಬಿ ರಸ್ತೆ, ಬಾಬಣ್ಣ ಚಹಾದ ಅಂಗಡಿ ಲೈನ್, ವಾರ್ಡ್ ನಂಬರ್. 28ರಲ್ಲಿ ಕೃಷ್ಣ ಟ್ಯೂಷನ್ ಲೈನ್, ಸೋಲಾ ಪಟ್ಟಿ ಲೈನ್, ಗವಾಯಿಗಳ ಆಶ್ರಮ ಮುಂದಿನ ಲೈನ್, ಅಬ್ಬಿಗೇರಿ ಲೈನ್, ವಾರ್ಡ್ ನಂಬರ್. 22ರಲ್ಲಿ ಅಮರೇಶ್ವರ ನಗರ, ತಾಜನಗರ, ರಾಚೋಟೇಶ್ವರ ನಗರ, ಶರಣಪ್ಪನ್ ಲೈನ್, ವಾರ್ಡ್ ನಂಬರ್. 19ರಲ್ಲಿ ಹಾಳದಿಬ್ಬ, ಕರಿದೇವರು ಗುಡಿ, ವಾರ್ಡ್ ನಂಬರ್. 20 ರಲ್ಲಿ ಖಾನತೋಟ, ಹುಲಿಗೆಮ್ಮನ ಗುಡಿ, ಬಳ್ಳಾರಿ ಭಾಗ 1,2,3 ಖಾನತೋಟ ಶರೀಫ ಅಜ್ಜನ ಗುಡಿ 1,2,3 ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 2023-24ನೇ ಸಾಲಿಗೆ ಮತಿಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಭೌದ್ಧರು, ಸಿಖ್ಖರು, ಪಾರ್ಸಿಗಳು, ಸಮುದಾಯದವರಿಗೆ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರುವ 18 ರಿಂದ 55 ವರ್ಷ ವಯೋಮಿತಿವುಳ್ಳ ಆಸಕ್ತರಿಂದ ಅರಿವು ಸಾಲ ಯೋಜನೆ, ಶ್ರಮಶಕ್ತಿ ಸಾಲ ಯೋಜನೆ, ಶ್ರಮಶಕ್ತಿ ವಿಶೇಷ ಮಹಿಳಾ ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣಕ್ಕಾಗಿ ಬಡ್ಡಿರಹಿತ ಸಾಲ ಯೋಜನೆ, ಸಮುದಾಯ ಆಧಾರಿತ ತರಬೇತಿ ▸▸3ನೇ ಪುಟಕ್ಕೆ

### ಜನತಾ ದರ್ಶನ ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬರ ವಿಭಿನ್ನ ಕೋರಿಕೆ

# 'ಪದ್ಮಭೂಷಣ ಪ್ರಶಸ್ತಿ ಕೊಡಿಸಿ ಸರ್!'

■ವಿಜಯಸಾಕ್ಷಿ ಸುದ್ದಿ, ಗದಗ

ಈಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ನಡೆಸಿದ ಜನತಾ ದರ್ಶನ ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬರು ತನಗೆ ಪದ್ಮಭೂಷಣ ಪ್ರಶಸ್ತಿ ಕೊಡಿಸುವಂತೆ ಕೋರಿಕೊಂಡಿದ್ದು, ಕಾರ್ಯಕ್ರಮದಲ್ಲಿ ಸೇರಿದವರೆಲ್ಲರ ಗಮನ ಸೆಳೆಯಿತು.

ಶನಿವಾರ ಜಿಲ್ಲಾಡಳಿತ ಭವನದ ಆವರಣದಲ್ಲಿ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಹೆಚ್ಚಿನವರು ಆಶ್ರಯ ಮನೆ, ವೃದ್ಧಾಪ್ಯ ವೇತನ, ವಿಧವಾ ವೇತನ, ರಸ್ತೆ ಸಮಸ್ಯೆಗಳನ್ನು ಬಗೆಹರಿಸುವಂತೆ ಅಹವಾಲು ಸಲ್ಲಿಸಿದರು. ಮುಂಡರಗಿ ತಾಲೂಕಿನ ಅಬ್ದುಲ್ ಎನ್ನುವವರು, ನಾನು ಕಳೆದ 12 ವರ್ಷಗಳಿಂದ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ಸಾರ್ವಜನಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ನನ್ನ ಸೇವೆಗಳನ್ನು ಪರಿಗಣಿಸಿ ನನಗೆ ಪದ್ಮಭೂಷಣ ಪ್ರಶಸ್ತಿ ಕೊಡಿಸಿ ಸರ್, ನಿಮ್ಮ ಶಿಫಾರಸು ಪತ್ರವಿದ್ದರೆ ಅನುಕೂಲವಾಗುತ್ತದೆ ಎಂದು ಕೋರಿಕೆ ಸಲ್ಲಿಸಿದರು.

ಈ ಅರ್ಜಿ ಸ್ವೀಕರಿಸಿದ ಸಚಿವ ಎಚ್.ಕೆ ಪಾಟೀಲ ಅರೆಕ್ಷಣ ಅಚ್ಚರಿಗೊಳಗಾಗಿ, ನಿಮ್ಮ ಸೇವಾ ಮನೋಭಾವವನ್ನು ಗೌರವಿಸುತ್ತೇನೆ. ಆದರೆ ಪ್ರಶಸ್ತಿ ಕೊಡಿಸುವುಸು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಜಿಲ್ಲಾಮಟ್ಟದಲ್ಲಿ ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇವೆ ಎಂದರು.

ಶಿರಹಟ್ಟಿ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಸುಜಾತಾ ದೊಡ್ಡಮನಿ ಅವರು ಅಬ್ದುಲ್ ಅವರಿಗೆ ಪದ್ಮಭೂಷಣ ಪ್ರಶಸ್ತಿಗೆ ಶಿಫಾರಸ್ಸು ಮಾಡುವಂತೆ ಎಚ್.ಕೆ ಪಾಟೀಲರಿಗೆ ಬರೆದ ಪತ್ರದೊಂದಿಗೆ ಆಗಮಿಸಿದ್ದ ಅಬ್ದುಲ್, ಪತ್ರದ ಪ್ರತಿಯನ್ನು ಬಹಿರಂಗವಾಗಿ ಪ್ರದರ್ಶಿಸಿ ಸಚಿವರಿಗೆ ಮನವಿ ಮಾಡಿಕೊಂಡರು.

ಕಳಸಾಪುರ ಗ್ರಾ.ಪಂ ವ್ಯಾಪ್ತಿಯ ಆದಿತ್ಯ ನಗದಲ್ಲಿ ಜೆಜೆಎಂ ಯೋಜನೆ ಅಪೂರ್ಣಗೊಂಡಿದ್ದು, 40 ಕುಟುಂಬಗಳಿಗೆ ▸▸3 ನೇ ಪುಟಕ್ಕೆ




### ಜಿಲ್ಲಾ ಮಟ್ಟದ ಜನತಾ ದರ್ಶನ

# ವಿಕಲಚೇತನ ಬಸಯ್ಯ ಅವರಿಗೆ ಲ್ಯಾಪ್‌ಟಾಪ್, ಪ್ರಿಂಟರ್ ವಿತರಣೆ




■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾಡಳಿತ ಭವನದಲ್ಲಿ ಜರುಗಿದ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವು ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸುವದರ ಜೊತೆಗೆ ಜನಸಾಮಾನ್ಯರು ಸ್ವಾಭಿಮಾನದ ಬದುಕು ಸಾಗಿಸಲು ಸರಕಾರ ಸದಾ ಬದ್ಧವಾಗಿದೆ ಎಂಬುದಕ್ಕೆ ಸಾಕ್ಷಿಯಾಯಿತು.

ಜಿಲ್ಲಾಡಳಿತ ಭವನದಲ್ಲಿ ಶನಿವಾರದಂದು ಜರುಗಿದ ಜನತಾ ದರ್ಶನ ಕಾರ್ಯಕ್ರಮಕ್ಕೆ ಆಗಿಮಿಸಿದ್ದ ನೀಲಗುಂದ ಗ್ರಾಮದ ಶರಣಬಸಯ್ಯ ಅವರು ಸ್ವಯಂ ಉದ್ಯೋಗದಿಂದ ಸ್ವಾಭಿಮಾನದ ಬದುಕು ಸಾಗಿಸಲು ಅನುಕೂಲವಾಗಯವಂತೆ ಸಚಿವರಲ್ಲಿ ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ಗಳನ್ನು ಒದಗಿಸುವಂತೆ ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಸಚಿವರಾದ ಎಚ್.ಕೆ.ಪಾಟೀಲ ಅವರು, ವಿಶೇಷ ಮುತುವರ್ಜಿ ವಹಿಸಿ ಕೆಲವೆ ಗಂಟೆಗಳಲ್ಲಿ ವಿಕಲಚೇತನ ಶರಣಬಸಯ್ಯ ಅವರಿಗೆ ಲ್ಯಾಪ್‌ಟಾಪ್ ಹಾಗೂ ಪ್ರಿಂಟರ್‌ನ್ನು ವಿತರಿಸುವ ಮೂಲಕ ವಿಕಲಚೇತನ ಶರಣಬಸಯ್ಯ ಅವರು ಸ್ವಾಭಿಮಾನದ ಬದುಕು ಸಾಗಿಸುವಂತೆ ಬೆನ್ನು ತಟ್ಟಿದರು.

## ಸಾಕ್ಷಿ ಸುಭಾಷಿತ

**ಗರ್ವ, ಕೆಟ್ಟ ಮಾತು, ಹಠವಾದಿತ್ವ ಮಾತುಗಳು ಮತ್ತು ಇತರರು ಹೇಳುವುದನ್ನು ಕೇಳದಿರುವುದು ಮೂರ್ಖರ ಗುರುತುಗಳು.**

**–ಸುಭಾಷಿತ**

## ಸಂಪಾದಕೀಯ

# ಮಕ್ಕಳ ಅಶ್ಲೀಲ ಚಿತ್ರ ವೀಕ್ಷಣೆಗೆ ಬೇಕು ಕಡಿವಾಣ

ಆಧುನಿಕ ತಂತ್ರಜ್ಞಾನ ಮಾನವ ಕುಲಕ್ಕೆ ಸಾಕಷ್ಟು ಪ್ರಯೋಜನಕಾರಿಯಾಗಿದೆ. ಆದರೆ ಅದಕ್ಕಿಂತ ಹೆಚ್ಚು ಅಪಾಯ ತಂದೊಡ್ಡಿರುವುದು ಅಷ್ಟೆ ನಿಜವಾಗಿದೆ.

ಅಧ್ಯಯನವೊಂದರ ವರದಿ ಪ್ರಕಾರ ದೇಶದ 13 ವರ್ಷಕ್ಕಿಂತ ಕಡಿಮೆ ವಯೋಮಾನದವರು ಅಶ್ಲೀಲ ಚಿತ್ರಗಳನ್ನು ವೀಕ್ಷಣೆ ಮಾಡುತ್ತಿರುವುದು ಬಹಿರಂಗಗೊಂಡಿದೆ. ಪಾಲಕರ ಮೊಬೈಲ್‌ಗಳನ್ನು ಹಿಡಿದು ಈ ಬಾಲಕರು, ಅಶ್ಲೀಲ ಚಿತ್ರಗಳನ್ನು ವೀಕ್ಷಿಸುವ ಮೂಲಕ ದಾರಿ ತಪ್ಪುತ್ತಿದ್ದಾರೆ. ಈ ಮುಗ್ಧ ಬಾಲಕರು ವ್ಯಸನಿಗಳಾಗಿ ಬದಲಾಗುತ್ತಿರುವುದು ಆತಂಕಕಾರಿಯಾಗಿದೆ.

ಭಾರತದಲ್ಲಿ ನೀಲಿಚಿತ್ರ ವೀಕ್ಷಣೆಗೆ ನಿರ್ಬಂಧ ವಿಧಿಸಿದ್ದರೂ ವಾಮ ಮಾರ್ಗದ ಮೂಲಕ ಅವುಗಳನ್ನು ನೋಡಬಹುದಾಗಿದೆ. ಆ ವಾಮ ಮಾರ್ಗಗಳನ್ನ ಬಾಲಕರು, ಹದಿಹರೆಯದ ಯುವಕರು ಬಳಸಿಕೊಂಡು ನೋಡುತ್ತಿರುವುದು ಈಗ ವ್ಯಸನ ಎಂದು ಪರಿಗಣಿಸಲ್ಪಟ್ಟಿದೆ.

ಮುಂದುವರೆದ ದೇಶಗಳಲ್ಲಿ ನೀಲಿಚಿತ್ರ ವೀಕ್ಷಣೆ ಮತ್ತು ದೈಹಿಕ ಸಂಪರ್ಕ ಅತ್ಯಂತ ಸರ್ವೇಸಾಮಾನ್ಯವಾಗುತಿದೆ. ಆದರೆ ಭಾರತದಂತಹ ಮಡಿವಂತಿಕೆಯ ದೇಶಗಳಲ್ಲಿ ಮಕ್ಕಳು ನೀಲಿ ಚಿತ್ರ ವೀಕ್ಷಣೆ ಮಾಡುತ್ತಾರೆ ಎನ್ನುವುದು ಅಪರಾಧಕ್ಕೆ ಸಮಾನವಾದಂತಹ ಕೃತ್ಯ ಎಂದು ಪರಿಗಣಿಸಲಾಗುತ್ತಿದೆ.

ನೀಲಿಚಿತ್ರ ವೀಕ್ಷಣೆ ಅಪರಾಧ ಅಲ್ಲದಿದ್ದರೂ ಸಹ ಆ ವಯಸ್ಸಿಗೆ ನೋಡುವುದು ಸಹ ಅವೈಜ್ಞಾನಿಕ ಮತ್ತು ಅಸ್ವಭಾವವಿಕ ಎನಿಸಿಕೊಳ್ಳುತ್ತದೆ. ಇದಕ್ಕೆ ಯಾವುದೇ ಸರ್ಕಾರವನ್ನ ದೂಷಿಸಲು ಸಾಧ್ಯವಿಲ್ಲ. ಪಾಲಕರೇ ಇದಕ್ಕೆ ನೇರ ಹೊಣೆಗಾರರು.

13 ವರ್ಷದ ಬಾಲಕರಿಗೆ ಯಾವುದೇ ಪಾಲಕರು ಮೊಬೈಲ್ ಖರೀದಿಸಿಕೊಡಲು ಸಾಧ್ಯವಿಲ್ಲ. ಆ ವಯಸ್ಸಿನ ಬಾಲಕರೆಲ್ಲರೂ ಪಾಲಕರ ಮೊಬೈಲ್‌ಗಳನ್ನೇ ಆಶ್ರಯಿಸುತ್ತಾರೆ. ಹೀಗಾಗಿ ಪಾಲಕರು ಮೊಬೈಲ್ ಬಳಕೆ ಬಗ್ಗೆ ಸಾಕಷ್ಟು ಜಾಗೃತೆ ವಹಿಸಬೇಕಾಗಿದೆ.

ಯಾವ ತಂತ್ರಜ್ಞಾನದಿಂದ ಬಾಲಕರು ದಾರಿ ತಪ್ಪುತ್ತಿದ್ದಾರೋ ಅದೇ ತಂತ್ರಜ್ಞಾನ ಬಳಸಿಕೊಂಡು ಮಕ್ಕಳು ಈ ರೀತಿಯ ವ್ಯಸನದಿಂದ ದೂರವಿಡಲು ಸಾಧ್ಯವಿದೆ. ಆಧುನಿಕ ಮೊಬೈಲ್ ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿ ಕಂಡಿದೆ.

ಪಾಲಕರಾದವರು ಸಹ ನೀಲಿಚಿತ್ರ ವೀಕ್ಷಣೆಯನ್ನು ಕಡಿಮೆ ಮಾಡಬೇಕು. ವಿಶೇಷವಾಗಿ 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿರುವ ಪಾಲಕರು ಮೊಬೈಲ್ ಬಳಕೆ ಬಗ್ಗೆ ಸಂಯಮ ಮತ್ತು ಜಾಗೃತಿ ವಹಿಸಬೇಕು. ಅದರಲ್ಲೂ ಕಾರ್ಟೂನ್ ನೋಡಲು ಮಕ್ಕಳ ಕೈಗೆ ಮೊಬೈಲ್ ಕೊಡುವಂಥ ಪಾಲಕರು ಮಕ್ಕಳಷ್ಟೆ ಜಾಗೃತಿ ವಹಿಸಬೇಕಾಗಿದೆ.

ಮಕ್ಕಳ ಕೈಗೆ ಮೊಬೈಲ್ ಕೊಡುವ ಮುನ್ನ ಸಾಕಷ್ಟು ಮುನ್ನೆಚ್ಚರಿಕೆ ಮತ್ತು ಸೆಟ್ಟಿಂಗ್ ಗಳನ್ನು ಬದಲಾಯಿಸಬೇಕಿದೆ. ಅವುಗಳ ಬಗ್ಗೆ ಪಾಲಕರು ಎಚ್ಚೆತ್ತುಕೊಂಡಲ್ಲಿ ಮಕ್ಕಳ ವ್ಯಸನ ಕಡಿಮೆ ಮಾಡಬಹುದು. ಇದು ಸರಕಾರದ ಕೆಲಸ ಅಲ್ಲ ಎನ್ನುವುದು ಪಾಲಕರು, ಸಮಾಜ ಅರ್ಥ ಮಾಡಿಕೊಳ್ಳಬೇಕು.

## ಹಳ್ಳಿಗರಿಗೆ ಸಿಗುವ ನೈಸರ್ಗಿಕ ಮಲ್ಟಿ ವಿಟಾಮಿನ್‌ಗಳು ಎಲ್ಲರಿಗೂ ದಕ್ಕುವಂತಾಗಲಿ

# ನಿಸರ್ಗವೇ ಕರುಣಿಸುವ ಸ್ವಾಭಾವಿಕ ಆಹಾರಗಳು

2019ರಲ್ಲಿ ಕೋವಿಡ್–19ರ ಲಾಕ್‌ಡೌನ್ ಸೃಷ್ಟಿಸಿದ ಅವಾಂತರ ಒಂದೆರಡಲ್ಲ. ಉಳಿದೆಲ್ಲವುಗಳಿಗಿಂತ ಹೆಚ್ಚು ಹಿಂಸೆ ನೀಡಿದ್ದು, ನಿತ್ಯದ ಊಟ ಬೇಯಿಸಿಕೊಳ್ಳುವುದು. ಪಾಪ, ನಗರವಾಸಿಗಳಿಗೆ ವಾರಕ್ಕಾಗುವಷ್ಟೇ ದಿನಸಿ ತರಕಾರಿ ತಂದಿಟ್ಟುಕೊಳ್ಳುವ ಅಭ್ಯಾಸ. ವಾರಾಂತ್ಯದ ಹೊತ್ತಿಗೆ ದಿನಸಿ ತುಂಬಿಟ್ಟ ಡಬ್ಬಿಗಳು, ತರಕಾರಿ ಬುಟ್ಟಿಗಳು ಖಾಲಿ. ಹೇಗೋ ಇರುವಷ್ಟರಲ್ಲಿಯೇ ಸುಧಾರಿಸಿಕೊಂಡು ಬಂದೀಖಾನೆಯಲ್ಲಿದ್ದವರಂತೆ ದಿನ ದೂಡಿದವರೇ ಹೆಚ್ಚು.



ಆದರೆ, ಹಳ್ಳಿಗರಿಗೆ ಹಾಗಲ್ಲ ನೋಡಿ. ಸಾಮಾನ್ಯವಾಗಿ 3–4 ತಿಂಗಳಿಗಾಗುವಷ್ಟು ಅಕ್ಕಿ ದಾಸ್ತಾನು ಇದ್ದೇ ಇರುತ್ತದೆ. ಇನ್ನು, ಬೇಸಿಗೆಯಲ್ಲಿ ಅಲ್ಲಿಂದ ಮುಂದೆ ಒಂದು ವರ್ಷಕ್ಕಾಗುವಷ್ಟು ಬೇಳೆ–ಕಾಳುಗಳನ್ನು ತಂದು, ತೊಳೆದು, ನಾಲ್ಕಾರು ಬಿಸಿಲು ಒಣಗಿಸಿಸಿಡುವ ಪದ್ಧತಿ ನಮ್ಮಲ್ಲಿದೆ. ಇಷ್ಟರ ಮಟ್ಟಿಗೆ ತೊಂದರೆಯಿಲ್ಲ. ಇನ್ನು ನಿತ್ಯದ ತರಕಾರಿಗೇನು ಮಾಡ್ತಿದ್ರಿ? ಸಂತೆಗಳೇ ಇರುತ್ತಿರಲಿಲ್ಲವಲ್ಲ ಎನ್ನಬೇಡಿ. ನಾವು ಸಂತೆಯ ಕಡೆ ಮುಖ ಮಾಡುತ್ತಿದ್ದುದ್ದೇ 2–3 ತಿಂಗಳಿಗೊಮ್ಮೆ! 'ಮತ್ತೇನ್ರಿ, ಹಳ್ಳಿಗಳಲ್ಲಿ ಬೇಕಾದಷ್ಟು ಜಾಗ ಇರುತ್ತೆ, ತಮ್ಮ ಮನೆಗೆ ಬೇಕಾದ ತರಕಾರಿಗಳನ್ನ ತಾವೇ ಬೆಳೆದುಕೊಳ್ತಾರೆ ಬಿಡಿ. ಈ ಸಿಟಿಗಳಲ್ಲಿ ನಮಗೆ ಅಂಗಡಿಯ ತರಕಾರಿಗಳೇ ಗತಿ' ಅನ್ನಿಸಿದರೂ, ಅದು ಅರ್ಧ ಸತ್ಯ ಮಾತ್ರ.

ನಾವಿಲ್ಲಿ ಬೇಕೆಂದು ಬೆಳೆದುಕೊಳ್ಳುವ ತರಕಾರಿಗಳು ಅರ್ಧದಷ್ಟು ಮಾತ್ರವಾದರೆ, ಉಳಿದರ್ಧ ಸೊಪ್ಪು–ತರಕಾರಿಗಳನ್ನು ನಮಗೆ ನಿಸರ್ಗವೇ ಸ್ವಾಭಾವಿಕವಾಗಿ ಕರುಣಿಸುತ್ತದೆ. ಅದರಲ್ಲೇ ಇರುವುದು ನಿಜವಾದ ಸ್ವಾರಸ್ಯ. ಆಯಾ ಕಾಲಕ್ಕೆ ತಕ್ಕನಾಗಿ ಲಭ್ಯವಾಗುವ ಸೊಪ್ಪು–ತರಕಾರಿಗಳನ್ನು ಅದಾಗಲೇ ಕಿತ್ತು ತಂದು ಅಡುಗೆ ಮಾಡಿ ಉಣ್ಣುವದಿದೆಯಲ್ಲ, ಅದರಷ್ಟು ಆರೋಗ್ಯ ಮತ್ತೆಲ್ಲೂ ಸಿಗದು ನೋಡಿ.

ಮಗೇಕಾಯಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಬೆಳೆಯುವ ಆಪದ್ಬಾಂಧವ ತರಕಾರಿ. ನೋಡಲೇನು, ಮಂಗಳೂರು ಸೌತೆಯ ಸೋದರ ಸಂಬಂಧಿಯಂತೆಯೇ ಇರುತ್ತದೆ. ಬಣ್ಣ ಮಾತ್ರ ಬೇರೆ ಅಷ್ಟೇ. ತಿಳಿಹಸಿರು, ಬಿಳಿಯ ಪಟ್ಟೆ ಹೀಗೆ ಸ್ವಲ್ಪ ಸ್ವಲ್ಪ ವ್ಯತ್ಯಾಸದೊಂದಿಗೆ ಒಳತಳಿಗಳೂ ಇವೆ. ಇಶೇಷವೆಂದರೆ, ಚೆನ್ನಾಗಿ ಬಲಿತ ಕಾಯಿಗಳನ್ನು 6 ತಿಂಗಳು ಮೇಲ್ಪಟ್ಟು ಸಂಗ್ರಹಿಸಿಡಬಹುದು! ಸಾಂಬಾರ್, ಪಲ್ಯ, ಮಜ್ಜಿಗೆ ಹುಳಿ ಹೀಗೆ ಎಲ್ಲದಕ್ಕೂ ಹೊಂದುವ ಆರೋಗ್ಯಕರ ಬಳ್ಳಿ ತರಕಾರಿ.

ಇದೀಗ ಮಳೆಗಾಲ. ಈ ಕಾಲದಲ್ಲಿ ಉಳಿದ ತರಕಾರಿಗಳು ನಮ್ಮ ಮಲೆನಾಡಿನಲ್ಲಿ ಚೆನ್ನಾಗಿ ಬೆಳೆಯದು. ಇನ್ನೇನು ಮಾಡೋದು? ವಾರಕ್ಕೆ 2–3 ದಿನ ಕೆಸುವಿನೆಲೆಯ ಗೊಜ್ಜು, ಪಲ್ಯ! ಈ ಕೆಸುವಿನ ಎಲೆಯ ವಿಶೇಷತೆ ಹಳ್ಳಿಗರ ಹೊರತಾಗಿ ಹಲವರಿಗೆ ಗೊತ್ತಿಲ್ಲ. ಹೊಟ್ಟೆಯೊಳಗಿನ ಕಲ್ಮಷಗಳನ್ನೆಲ್ಲ ಹೊರಹಾಕುವ ಶಕ್ತಿ ಇದಕ್ಕಿದೆ. ಅದರಲ್ಲೂ ಥರಾವರಿ ವೆರೈಟಿಗಳು. ಒಂದಿಷ್ಟು ಬೆಳ್ಳುಳ್ಳಿ ಎಸಳು, ಒಂದು ಹಿಡಿ ಜೀರಿಗೆ ಮೆಣಸು ಜಜ್ಜಿ ಒಗ್ಗರಣೆ ಹಾಕಿ ಬಿಸಿಬಿಸಿಯಾಗಿ ಉಣ್ಣುತ್ತಿದ್ದರೆ, ಮಳೆ–ಗಾಳಿಯ ಛಳಿ ಹತ್ತಿರ ಬಾರದು ನೋಡಿ!

ಇದರೊಂದಿಗೆ ಆಯಾ ಕಾಲಕ್ಕೆ ಹಾಗೂ ಎಲ್ಲ ಕಾಲಕ್ಕೂ ಸಲ್ಲುವ ಅದೆಷ್ಟು ಸೊಪ್ಪು–ತರಕಾರಿ ಬೇಕು ಹೇಳಿ. ಎಲವರಿಗೆ ಸೊಪ್ಪು, ವಿಟಾಮಿನ್ ಸೊಪ್ಪು, ಬಸಳೆ, ಕೆಂಪು/ಬಿಳಿ ಹರಿವೆ, ಒಂದೆಲಗ, ಸುರಲೇ ಕುಡಿ, ಕರಿಬೇವು, ಬಿಲ್ವಪತ್ರೆ, ಕಾಕಿ ಸೊಪ್ಪು, ಹಲಸಿನ ಕಾಯಿ, ಹಲಸಿನ ಬೀಜ, ಕತ್ತಿ ಅವರೆ, ಮತ್ತಿ ಅವರೆ, ಚಪ್ಪರದವರೆ, ಮಾವಿನ ಶುಂಠಿ, ಬಾಳೆ ದಿಂಡು, ಕೆಸುವಿನ ಗಡ್ಡೆ, ಗೆಣಸು, ಸೂಜಿ ಮೆಣಸು, ಮುರುಗಲು ಹಣ್ಣಿನ ಸಿಪ್ಪೆ...ಓಹ್, ಇನ್ನೂ ಪಟ್ಟಿ ಮುಂದುವರೆಯುತ್ತಲೇ ಹೋದರೆ ಸಂತೆಯ ಕಡೆ ಹೋಗುವ ಅಗತ್ಯವಾದರೂ ಏನಿದೆ?! ಆಯಾ ಪ್ರದೇಶಕ್ಕನುಗುಣವಾಗಿ ಲಭ್ಯವಾಗುವ ಇಂಥ ತರಕಾರಿ–ಸೊಪ್ಪುಗಳೇನೂ ಕಡಿಮೆಯಿಲ್ಲ.

ಇವೆಲ್ಲವೂ ಕೇವಲ ಹೊಟ್ಟೆ ತುಂಬಿಸಲಷ್ಟೇ ದಾರಿಯಲ್ಲ. ಬದಲಾಗಿ, ಆಯಾ ಕಾಲಕ್ಕೆ ನೈಸರ್ಗಿಕವಾಗಿ ಲಭ್ಯವಾಗುವ ವಿಟಾಮಿನ್ ಬಟ್ಟಲುಗಳು. ಇದಕ್ಕೆಂದೇ ಹಳ್ಳಿಯಲ್ಲಿ ವಾಸಿಸುತ್ತ ಇಂಥ ಮೂಲಗಳನ್ನೇ ನೆಚ್ಚಿಕೊಂಡಿರುವವರಿಗೆ ಕೃತಕ ಮಲ್ಟಿ–ವಿಟಾಮಿನ್‌ಗಳ ಅಗತ್ಯವೂ ಕಾಣಿಸದು.

ಇವುಗಳಿಗೆ ಹೆಚ್ಚಿನ ಆರೈಕೆಯೂ ಬೇಡ, ಕಳೆ ಗಿಡಗಳೆಂದು ಕಿತ್ತು ತೆಗೆಯದಿದ್ದರಾಯ್ತಷ್ಟೇ. ನಿಮ್ಮ ಕಥೆಯೇನೋ ಹಾಗಾಯ್ತು, ಪಟ್ಟಣದಲ್ಲಿ ಸಣ್ಣ ಮನೆಗಳಲ್ಲಿ ವಾಸಿಸುವ, ಹೆಚ್ಚಿನ ಜಾಗ ಇಲ್ಲದವರಿಗೇನು ದಾರಿ ಎಂಬ ಪ್ರಶ್ನೆಗೂ ಈಗಾಗಲೇ ಹಲವರು ದಾರಿಗಳನ್ನೂ ಕಂಡಿದ್ದಾರೆ. ಟೆರೇಸ್‌ನಲ್ಲಿ ಅಥವಾ ಇರುವ ಪುಟ್ಟ ಅಂಗಳದಲ್ಲಿ, ಪಾಟ್‌ಗಳಲ್ಲಿಯೂ ತರಕಾರಿಗಳನ್ನು ಬೆಳೆದುಕೊಳ್ಳುತ್ತ ಅರ್ಧದಷ್ಟಾದರೂ ಸ್ವಾವಲಂಬಿಗಳಾಗಿ ವಿಷಮುಕ್ತ ತರಕಾರಿ ಸೇವಿಸುತ್ತಿದ್ದಾರೆ. ಅಂಥವರ ಸಾಲಿನಲ್ಲಿ ಮುಂದಿನವರು ನೀವೇ ಆಗಬಹುದು!

**–ಅಲೆಮಾರಿ**

# ಸರಕಾರಿ ಶಾಲೆಯ ನೂತನ ಎಸ್‌ಡಿಎಂಸಿ ರಚನೆ

■ **ವಿಜಯಸಾಕ್ಷಿ ಸುದ್ದಿ, ಗದಗ**

ರೋಣ ತಾಲೂಕಿನ ಸಂದಿಗವಾಡ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್‌ಡಿಎಂಸಿಯ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಸಭೆ ನಡೆಯಿತು.



ಅಧ್ಯಕ್ಷರಾಗಿ ಮಂಜುನಾಥ ಹೊಂಬಳ, ಉಪಾಧ್ಯಕ್ಷರಾಗಿ ಸುವರ್ಣಾ ಗಾಣಿಗೇರ, ಸದಸ್ಯರಾಗಿ ನಿಂಗಪ್ಪ ಬಳಗೋಡ, ಮೌನೇಶ ಬಡಿಗೇರ, ಶಂಕ್ರಪ್ಪ ಜಾಲಿಹಾಳ, ಪ್ರಕಾಶ ಜಾಲಿಹಾಳ, ನಿಂಗಪ್ಪ ಭೂಸಗೌಡ್ರ, ಮುತ್ತು ಹೂಗಾರ, ವಸಂತ ದೊಡ್ಡಮನಿ, ಪ್ರಕಾಶ ಕೊಡತಗೇರಿ, ಶ್ರೀದೇವಿ ಹಿರೇಮಠ, ಲಲಿತಾ ಹುಲ್ಲೂರ, ಬಸಮ್ಮ ಬೆಳಹಾರ, ದಾಕ್ಷಾಯಿಣಿ ಭೂಸಗೌಡ್ರ, ಚೆನ್ನವ್ವ ಸುಗ್ಗಿ, ಉಮಾ ಕರೆಕ್ಕನವರ, ಲಾಲ್‌ಸಾಬ್ ನದಾಫ್, ರೇಣುಕಾ ಮಾದರ ಆಯ್ಕೆಯಾದರು.

ನೂತನ ಅಧ್ಯಕ್ಷ ಮಂಜುನಾಥ ಹೊಂಬಳ, ಶಾಲಾ ಮುಖ್ಯೋಪಾಧ್ಯಾಯ ಎಚ್.ಎಸ್ ಭಜಂತ್ರಿ ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷ ಹನಮಂತಗೌಡ ಹುಲ್ಲೂರ, ಗ್ರಾ.ಪಂ ಸದಸ್ಯರಾದ ಬಸಮ್ಮ ಟೆಕ್ಕೇದ, ಲಲಿತಾ ಜಂಪನ್ನವರ, ಶಂಕ್ರಪ್ಪ ಬೆಳಹಾರ, ಇಂದ್ರಗೌಡ ಪಾಟೀಲ ಸೇರಿದಂತೆ ಗ್ರಾಮಸ್ಥರು ಇದ್ದರು.

# ಹಿಂಗಾರು ಬಿತ್ತನೆ ಬೀಜ ವಿತರಣೆ

■ **ವಿಜಯಸಾಕ್ಷಿ ಸುದ್ದಿ, ಮುಳಗುಂದ**


ಪಟ್ಟಣದ ಕೃಷಿ ಕೇಂದ್ರದಲ್ಲಿ ಶುಕ್ರವಾರ ಹಿಂಗಾರು ಹಂಗಾಮಿನ ಜೋಳ, ಗೋದಿ, ಕಡಲೆ, ಕುಸಬಿ ಬೀಜಗಳನ್ನು ಮುಳಗುಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಸುಂಕಾಪೂರ ವಿತರಿಸಿದರು.



ಮುಳಗುಂದ ಸಹಾಯಕ ಕೃಷಿ ನಿರ್ದೇಶಕ ಎಫ್.ಸಿ ಗುರಿಕಾರ ಮಾತನಾಡಿ, ಜೋಳ 10.20 ಕ್ವಿಂಟಲ್, ಕಡಲೆ 300 ಕ್ವಿಂಟಲ್, ಕುಸಬಿ 5 ಕ್ವಿಂಟಲ್, ಗೋದಿ–ಟ್ರೈಕೋಡರ್ಮಾ 1 ಕ್ವಿಂಟಲ್ ಲಭ್ಯವಿದ್ದು, ರೈತ ಬಾಂಧವರು ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು.

ಪ.ಪಂ ಸದಸ್ಯ ಎಸ್.ಸಿ ಬಡ್ನಿ, ನಾಗರಾಜ ದೇಶಪಾಂಡೆ, ಹಸಿರು ಸೇನೆ ರೈತ ಸಂಘದ ಅಧ್ಯಕ್ಷ ಬಸವರಾಜ ಕರಿಗಾರ, ಗುಡುಸಾಬ ಗಾಡಿ, ದ್ರಾಕ್ಷಾಯಣಿ ಕುರ್ತಕೋಟಿ, ಕಾಶಿಮ್‌ಸಾಬ ಹಾದಿಮನಿ ಇದ್ದರು.

# ಬಿಕಾಂ 3ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಸಾಧನೆ



■ **ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಕಾಂ ಕೋರ್ಸಿನ 3ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಾದ ಸುಷ್ಮಾ ಓಸೆಕಾರ (634) ಪ್ರಥಮ, ಪವನ ಮುದಗಲ್ಲ (620) ದ್ವಿತೀಯ, ರಾಜೇಶ್ವರಿ ಗಂಜಿ (607) ತೃತೀಯ, ಪ್ರಿಯಾ ಹಬೀಬ (600) ನಾಲ್ಕನೇ ಸ್ಥಾನ, ಶೃತಿ ಶೇಠ (595) ಐದನೇಸ್ಥಾನ ಪಡೆದಿದ್ದಾರೆ. ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಸಂಸ್ಥೆಯ ಚೇರಮನ್ ಎನ್.ಎಮ್ ಕುಡತರಕರ, ಪ್ರಾಚಾರ್ಯ ಬಿ.ಎಸ್ ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ನಿವೇದಿತಾ ಪೊಲೀಸ್‌ಪಾಟೀಲ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಅಂಜುಮನ್ ಇಸ್ಲಾಂ ಕಮಿಟಿ ವತಿಯಿಂದ ಶಾಸಕ ಜಿ.ಎಸ್ ಪಾಟೀಲರಿಗೆ ಸನ್ಮಾನ

# ಸಮಾಜದ ಅಭಿವೃದ್ಧಿಗೆ ಸದಾ ಬದ್ಧ

■ **ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಪ್ರತಿ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಕೊಡುಗೆ ಅಪಾರವಾಗಿದ್ದು, ಅವರಿಗೆ ಸದಾ ಚಿರಋಣಿಯಾಗಿರುವೆ. ಸಮಾಜದ ಅಭಿವೃದ್ಧಿಗೆ ನಾನು ಸದಾ ಬೆಂಬಲವಾಗಿ ನಿಲ್ಲುವುದರೊಂದಿಗೆ, ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ ಸಮಾಜದ ಮುಖಂಡರು ನೀಡಿರುವ ಮನವಿಗೆ ಪೂರಕವಾಗಿ ಎಲ್ಲ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಶಾಸಕ ಜಿ.ಎಸ್ ಪಾಟೀಲ ನುಡಿದರು.



ಪಟ್ಟಣದ ಕುಷ್ಟಗಿ ರಸ್ತೆಯ ಶಾದಿಮಹಲ್‌ನಲ್ಲಿ ಇಲ್ಲಿನ ಅಂಜುಮನ್ ಇಸ್ಲಾಂ ಕಮಿಟಿ ವತಿಯಿಂದ ನೀಡಿದ ಸನ್ಮಾನವನ್ನು ಸ್ವೀಕರಿಸಿ ಅವರು ಮಾತನಾಡಿದರು.

ಸಮಾಜದ ಅಧ್ಯಕ್ಷ ಹಸನ ತಟಗಾರ, ಮಾಜಿ ಚೇರಮನ್ ಎ.ಡಿ ಕೋಲಕಾರ, ನಿರ್ದೇಶಕ ದಾವಲ ತಾಳಿಕೋಟಿ ಮಾತನಾಡಿ, ಆರ್ಥಿಕವಾಗಿ, ರಾಜಕೀಯವಾಗಿ ಅತ್ಯಂತ ಹಿಂದುಳಿದ ವರ್ಗಗಳಲ್ಲಿ ಒಂದಾಗಿರುವ ಮುಸ್ಲಿಂ ಸಮುದಾಯದ ಅಭಿವೃದ್ಧಿಗಾಗಿ ಸಮಾಜದ ಮುಖಂಡರಿಗೆ ಸರ್ಕಾರವು ಈ ಬಾರಿ ನಿಗಮ ಮಂಡಳಿಗಳಲ್ಲಿ ಸ್ಥಾನಮಾನ ಕಲ್ಪಿಸಲಿ. ಈ ನಿಟ್ಟಿನಲ್ಲಿ ಶಾಸಕ ಜಿ.ಎಸ್ ಪಾಟೀಲರು ಸರ್ಕಾರದ ಮಟ್ಟದಲ್ಲಿ ಒತ್ತಡ ಹಾಕಬೇಕು ಎಂದು ಪ್ರಾಸ್ತವನೆ ಸಲ್ಲಿಸಿ, ಆಶ್ರಯ ಮನೆಗಳಲ್ಲಿ ಪ್ರಾತಿನಿಧ್ಯ, ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ, ಶಾದಿಮಹಲ್ ಹಾಗೂ ಜಾಮೀಯ ಮಸೀದಿ ನವೀಕರಣಕ್ಕೆ ಮತ್ತು ಶವಯಾತ್ರೆಗೆ ವಾಹನದ ವ್ಯವಸ್ಥೆ ಕಲ್ಪಿಸಬೇಕು ಎನ್ನುವ ಬೇಡಿಕೆಗಳನ್ನು ಶಾಸಕರಿಗೆ ಸಲ್ಲಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಅನಿಷ ಕೌಸರಿ, ಮುಸ್ಕಾನ ಸೈಯದ್, ಅಮೀರ ಬನ್ನೂರಿ ಮಾತನಾಡಿದರು.

ಇದಕ್ಕೂ ಮುನ್ನ ದಾವಲಸಾಬ ತಾಳಿಕೋಟಿ ಸಂವಿಧಾನ ಪೀಠಿಕೆ ಓದಿಸಿದರು.

ಕಾಲಜ್ಞಾನ ಮಠದ ಡಾ.ಶರಣ ಬಸವ ಶ್ರೀ, ಟಕ್ಕೇದ ದರ್ಗಾದ ನಿಜಾಮುದ್ದಿನಷಾ ಮಕಾನದಾರ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಮಾಜಿ ಚೇರಮನ್ ಎಂ.ಎಚ್ ಕೋಲಕಾರ, ಸುಭಾನಸಾಬ ಆರಗಿದ್ದಿ, ಪುರಸಭೆ ಸದಸ್ಯರಾದ ರಾಜು ಸಾಂಗ್ಲೀಕರ, ಮುರ್ತುಜಾ ಡಾಲಾಯತ, ಮುಖಂಡರಾದ ಸಿದ್ದಣ್ಣ ಬಂಡಿ, ರಫೀಕ್ ತೋರಗಲ್, ನಾಸಿರಅಲಿ ಸುರಪುರ, ಫಯಾಜ್ ತೋಟ–ದ, ಎ.ಕೆ ಕಾತರಕಿ, ಇಮ್ರಾನ್ ಅತ್ತಾರ, ಭಾಷೇಸಾಬ ಮುದಗಲ್ ಮುಂತಾದವರಿದ್ದರು.

# ಅ. 3ರಂದು ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ

■ **ವಿಜಯಸಾಕ್ಷಿ ಸುದ್ದಿ, ಗದಗ**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಇವರ ಪ್ರಾಯೋಜಕತ್ವದಲ್ಲಿ, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಇವರು ಸ್ವಂತ ಉದ್ಯೋಗ ಕೈಗೊಳ್ಳಲು ಇಚ್ಛಿಸುವ ಮಹಿಳೆಯರಿಗೆ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ಅಕ್ಟೋಬರ್ 3 ರಂದು ಮಂಗಳವಾರದಂದು ಹಮ್ಮಿಕೊಂಡಿದ್ದಾರೆ

ಈ ಕಾರ್ಯಕ್ರಮದಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರ್ಕಾರದ ಯೋಜನೆಗಳು, ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ, ಉದ್ಯಮ ನಿರ್ವಹಣೆ, ಇತ್ಯಾದಿ ವಿಷಯಗಳ ಕುರಿತು ತರಬೇತಿಯನ್ನು ನೀಡಲಾಗುವುದು.

ಸೆಪ್ಟೆಂಬರ್ 30 ರಂದು ಗದಗ ಮಹೇಶ್ವರಿ ವಿವಿದೋದ್ದೇಶಗಳ ಮಹಿಳಾ ಮಂಡಳದಲ್ಲಿ ಸಂದರ್ಶನ ನಡೆಸಲಾಗುವುದು.

ಭಾಗವಹಿಸುವವರು ಕನಿಷ್ಠ 18 ವರ್ಷದವರಾಗಿರಬೇಕು ಹಾಗೂ ಎಸ್. ಎಸ್. ಎಲ್. ಸಿ ಪಾಸಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ನಂ. 77958 55847, 87227 59959 ಸಂಪರ್ಕಿಸಬಹುದಾಗಿದೆ.

# ಗಾಲಾ ನರ್ಸಿಂಗ್ ಕಾಲೇಜಿನಲ್ಲಿ 'ವಿಶ್ವ ಹೃದಯ ದಿನ' ಕಾರ್ಯಕ್ರಮ

■ **ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ವಿ.ಪಿ ಗಾಲಾ ಸ್ಕೂಲ್ ಆಫ್ ನರ್ಸಿಂಗ್ ಹಾಗೂ ಇನ್ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್‌ನಲ್ಲಿ 'ವಿಶ್ವ ಹೃದಯ ದಿನ' ಕಾರ್ಯಕ್ರಮ ಆಚರಿಸಲಾಯಿತು.



ಪ್ರಾಂಶುಪಾಲ ಅಮರಯ್ಯ ಚಿನ್ನಯ್ಯನಮಠ ಮಾತನಾಡಿ, ನಮ್ಮ ದೇಹವನ್ನು ಸದೃಢವಾಗಿಟ್ಟುಕೊಳ್ಳುವುದು ಸಹ ಮುಖ್ಯವಾಗುತ್ತದೆ.

ಪ್ರತಿದಿನ ವ್ಯಾಯಾಮ, ಯೋಗಾಸನ ಮಾಡುವುದರಿಂದ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ದಿನನಿತ್ಯ ಕನಿಷ್ಠ 45 ನಿಮಿಷ ದೇಹವನ್ನು ದಂಡಿಸಿ, ವ್ಯಾಯಾಮ ಮಾಡಿ, ವಾಕ್ ಮಾಡಿ. ದಿನಕ್ಕೆ 10 ಸಾವಿರ ಹೆಜ್ಜೆ ನಡೆಯಿರಿ. ಇದು ಆರೋಗ್ಯಕ್ಕೆ ಒಳ್ಳೆಯದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಕ್ಷೆ ರಚನಾ ಗಾಲಾ, ಸೆಕ್ರೆಟರಿ ಪಂಕಜ್ ಗಾಲಾ, ನಿರ್ದೇಶಕ ಗುಂಜನ ಗಾಲಾ, ಕಾಲೇಜಿನ ಎಲ್ಲ ಸಿಬ್ಬಂದಿ ವರ್ಗ, ಎಲ್ಲ ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಾರಾಯಣ ಹಾರ್ಟ್‌ಕೇರ್ ಧಾರವಾಡ ವತಿಯಿಂದ ಬೇಸಿಕ್ ಲೈಫ್ ಕೇರ್ ಬಗ್ಗೆ ಆರೋಗ್ಯ ಶಿಕ್ಷಣ ತರಬೇತಿ ನಡೆಯಿತು.

# ಬೈಕ್ ಕಳ್ಳನ ಬಂಧನ: 7 ಬೈಕ್‌ಗಳು ವಶಕ್ಕೆ



■ **ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿ ಪೊಲೀಸ್ ಠಾಣೆ ಹಾಗೂ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಬೈಕ್ ಕಳ್ಳತನ ನಡೆಸುತ್ತಿದ್ದ ಆರೋಪಿಯನ್ನು ಶಿರಹಟ್ಟಿ ಪೊಲೀಸರು ಬಂಧಿಸಿ, ಬಂಧಿತನಿಂದ 7 ಬೈಕ್‌ಗಳನ್ನು ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಶಿರಹಟ್ಟಿ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣವೊಂದರ ಬೆನ್ನತ್ತಿದ ಪೊಲೀಸರು, ಎಸ್‌ಪಿ ಬಿ.ಎಸ್ ನೇಮಗೌಡ ಮತ್ತು ಡಿಎಸ್‌ಪಿ ಇವರ ಮಾರ್ಗದರ್ಶನದಲ್ಲಿ ಸಿಪಿಐ ನಾಗರಾಜ ಮಾಢಳ್ಳಿ, ಪಿಎಸ್‌ಐ ಈರಪ್ಪ ರಿತ್ತಿ ಹಾಗೂ ವಿಜಯಕುಮಾರ ತಳವಾರ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಿ, ಸೆ.28ರ ಬೆಳಗಿನ ಜಾವ ಆರೋಪಿ ಗುಡದಯ್ಯ ಲಕ್ಷ್ಮಣ ಮೋಡಕೇರ(21) ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಿದರು.

ಈ ಸಂದರ್ಭದಲ್ಲಿ ಶಿರಹಟ್ಟಿ ತಾಲೂಕಿನ ಕಡಕೋಳ, ಛಬ್ಬಿ ಶಿರಹಟ್ಟಿ ಚರ್ಚ್ ಹತ್ತಿರ, ಗದಗ ಅಂತೂರ–ಬೆಂತೂರ, ಗಜೇಂದ್ರಗಡ, ಲಿಂಗಸೂರು, ಗುತ್ತಲದ ಹುರುಳಿಹಾಳ ಗ್ರಾಮಗಳಲ್ಲಿ ಕಳುವು ಮಾಡಿದ್ದ ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಯನ್ನು ಪತ್ತೆಹಚ್ಚಿ, ಬಂಧಿಸುವಲ್ಲಿ ಯಶಸ್ವಿಯಾದ ಪಿಎಸ್‌ಐ ಈರಪ್ಪ ರಿತ್ತಿ, ವಿಜಯಕುಮಾರ ತಳವಾರ, ಸಿಬ್ಬಂದಿಗಳಾದ ಎಲ್. ಎಚ್ ಲಮಾಣಿ, ಆರ್.ಎಸ್ ಯರಗಟ್ಟಿ, ಎಸ್.ಸಿ ಕಪ್ಪತ್ತನವರ, ಎಂ.ವಾಯ್ ಪಿರಂಗಿ, ಕಿರಣ ಪವಾರ, ಸಿ.ಸಿ ಗುಂಡೂರಮಠ, ರಾಜೇಶ ವೀರಾಪೂರ, ಬಿ.ಜೆ ಮುಳಗುಂದ, ಹನಮಂತ ದೊಡ್ಡಮನಿ, ಆರ್.ಎಚ್ ಮುಲ್ಲಾ, ಎಸ್.ಎಚ್ ರಾಮಗೇರಿ, ತಾಂತ್ರಿಕ ಸಿಬ್ಬಂದಿಗಳಾದ ಗುರುರಾಜ ಬೂದಿಹಾಳ, ಸಂಜು ಕೊಡೂರ ಇವರ ಕಾರ್ಯಕ್ಕೆ ಎಸ್‌ಪಿ, ಡಿಎಸ್‌ಪಿ, ಸಿಪಿಐ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ವಿಜ್ಞಾನ ಕ್ಷೇತ್ರಕ್ಕೆ ದೇವರ ಆಶೀರ್ವಾದವೂ ಮುಖ್ಯ

■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ ಸೈಂಟಿಫಿಕ್ ರಿಸರ್ಚ್‌ನ ಅಧ್ಯಕ್ಷ ಜಿ.ಯು ಕುಲಕರ್ಣಿಯವರ ಪತ್ನಿ ಇಂದಿರಾ ಕುಲಕರ್ಣಿ ನೇತೃತ್ವದಲ್ಲಿ ಜೆಎನ್‌ಸಿಎಎಸ್‌ಆರ್‌ನ ವಿಜ್ಞಾನಿಗಳ ಕುಟುಂಬದ ಸದಸ್ಯರು ಪಟ್ಟಣದ ಶ್ರೀ ಸೋಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. ದೇವಸ್ಥಾನವನ್ನು ಸಂಪೂರ್ಣವಾಗಿ ವೀಕ್ಷಿಸಿದ ಇಂದಿರಾ ಕುಲಕರ್ಣಿ ಮಾತನಾಡಿ, ಈ ದೇವಸ್ಥಾನದ ಶಿಲ್ಪಕಲೆ ಅದ್ಭುತ ಮತ್ತು ಇತಿಹಾಸ ಆಸಕ್ತಿದಾಯಕವಾಗಿದೆ. ಇಲ್ಲಿ ನಂದಿ ಮೇಲೆ ಶಿವ–ಪಾರ್ವತಿಯರು ಕುಳಿತಿರುವ ಮೂರ್ತಿ ಮತ್ತು ಇಲ್ಲಿನ ಲಜ್ಜಾಗೌರಿ ಮೂರ್ತಿ ಅಪರೂಪವೇ ಸರಿ. ಸುಧಾಮೂರ್ತಿಯವರು ದೇವಸ್ಥಾನ ಜೀರ್ಣೋದ್ಧಾರ ಮಾಡಿರುವದರಿಂದ ಹೆಚ್ಚಿನ ಕಳೆ ಬಂದಿದೆ. ವಿಜ್ಞಾನ ಕ್ಷೇತ್ರಕ್ಕೆ ದೇವರ ಆಶೀರ್ವಾದವೂ ಮುಖ್ಯವಾಗಿದೆ ಎಂದು ಹೇಳಿದರು.



ತಂಡದಲ್ಲಿದ್ದ ದೆಹಲಿಯ ಜಯಾ ಗಂಗೂಲಿ ಮಾತನಾಡಿ, ಇದು ಸಕಾರಾತ್ಮಕ ಚೈತನ್ಯಶಕ್ತಿ ತುಂಬುವಂತಹ ಸ್ಥಳವಾಗಿದೆ. ದೇವಸ್ಥಾನದ ಇತಿಹಾಸದ ಬಗ್ಗೆ ಎಲ್ಲೆಡೆ ಬೆಳಕು ಚೆಲ್ಲುವ ಕಾರ್ಯವಾಗಲಿ ಎಂದರು. ಅರ್ಚಕ ರಾಘವೇಂದ್ರ ಪೂಜಾರ ಮತ್ತು ಚಂದನ ಶಾಲೆಯ ಸಂಸ್ಥಾಪಕ ಟಿ.ಈಶ್ವರ ಅವರು ದೇವಸ್ಥಾನದ ಬಗ್ಗೆ ಮಾಹಿತಿ ನೀಡಿದರು. ತಂಡದಲ್ಲಿ ಅರುಣಾ ವಾಗ್ಮೋರೆ, ಲತಾ ಸುಂದರೇಶನ್, ಕಾಂತಾ ಕುಲಕರ್ಣಿ, ವ್ಹಿ.ಕಲ್ಯಾಣಿ ಇದ್ದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

### 'ವಿಜಯಸಾಕ್ಷಿ'

**ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.**

**ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..**

**ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.**

**E-mail: vijayasakshidaily@gmail.com**

**ಮೊ : 9019256545**

# 'ಪದ್ಮಭೂಷಣ ಪ್ರಶಸ್ತಿ ಕೊಡಿಸಿ ಸರ್!'

▶▶ಮೊದಲನೇ ಪುಟದಿಂದ

ಬೆಳಿಗ್ಗೆ 10.30ಕ್ಕೆ ಆರಂಭವಾದ ಜನತಾ ದರ್ಶನ ಕಾರ್ಯಕ್ರಮ ಸಂಜೆ 7 ಗಂಟೆವರೆಗೂ ನಡೆಯಿತು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೇಯಿ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ತಾಲೂಕುಗಳ ಅಧಿಕಾರಿಗಳು ಇದ್ದರು.

ನೀರಿನ ಸಮಸ್ಯೆ ಎದುರಾಗಿದೆ ಎಂದು ಗ್ರಾಮಸ್ಥರು ಮನವಿ ಸಲ್ಲಿಸಿದರು. 7 ದಿನದಲ್ಲಿ ಸಮಸ್ಯೆ ಪರಿಹರಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ನರಸಾಪುರ ಗ್ರಾಮದಲ್ಲಿ 90 ಮನೆಗಳಿಗೆ ಇ-ಸ್ವತ್ತು ಖಾತೆ ಮಾಡಿಕೊಡಲು ಪಿಡಿಓ ಸತಾಯಿಸುತ್ತಿರುವ ಕುರಿತು ಜನ ಅಳಲು ತೋಡಿಕೊಂಡರು. ವಾರದೊಳಗೆ ಪ್ರಕರಣ ಪರಿಶೀಲಿಸಿ ಇ-ಸ್ವತ್ತು ಮಾಡಿಕೊಡಲು ಪಿಡಿಒಗೆ ನಿರ್ದೇಶನ ನೀಡಲಾಯಿತು.

ಯಳವತ್ತಿ ಮತ್ತು ಯತ್ನಳ್ಳಿ ಗ್ರಾಮದ ನಡುವಿನ ರಸ್ತೆ ಹಾಳಾದ ಕಾರಣ ಸಂಚಾರಕ್ಕೆ ಅಡಚಣೆಯಾದ ಕುರಿತು ಗ್ರಾಮಸ್ಥರು ಅರ್ಜಿ ಸಲ್ಲಿಸಿದರು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳನ್ನು ಕರೆಸಿ, ಎರಡು ತಿಂಗಳೊಳಗಾಗಿ ರಸ್ತೆ ದುರಸ್ಥಿ ಕೈಗೊಳ್ಳುವಂತೆ ಮತ್ತು ತಕ್ಷಣವೇ ತಗ್ಗು ಗುಂಡಿಗಳನ್ನು ಮುಚ್ಚುವ ವ್ಯವಸ್ಥೆ ಮಾಡಲು ಸೂಚಿಸಿದರು.

### ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್‌ರನ್ನು ಒಂದುಗೂಡಿಸಿದ ಈದ್ ಮಿಲಾದ್ ಹಬ್ಬ

# ನಾವೆಲ್ಲ ಒಂದು ಎಂಬ ಭಾವನೆ ಮೂಡಲಿ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ರನ್ನು ಒಂದುಗೂಡಿಸಿದ ಈದ್ ಮಿಲಾದ್ ಹಬ್ಬದ ಆಚರಣೆ ವಿಶೇಷವಾಗಿದೆ ಎಂದು ಜಿಲ್ಲಾ ಭ್ರಾತೃತ್ವ ಸಮಿತಿಯ ತಂಡ ಹರ್ಷ ವ್ಯಕ್ತಪಡಿಸಿತು.




ಜಿಲ್ಲಾ ಭ್ರಾತೃತ್ವ ಸಮಿತಿಯ ಮುಖಂಡ ಹಾಗೂ ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಈದ್ ಮೀಲಾದ್ ಹಬ್ಬಕ್ಕೆ ಮುಸ್ಲಿಮರು ಯುಸೂಫಿಯಾ ಮಸೀದಿಗೆ ನನಗೆ ಮತ್ತು ನವನಗರದ ಚರ್ಚಿನ ಫಾದರ್ ಚನ್ನಬಸಪ್ಪ ಅಪ್ಪಣ್ಣವರರಿಗೆ ಕರೆದಿದ್ದರು. ಊರಿನ ಶಾಸಕರು, ಗಣ್ಯರು ಸಭೆಗೆ ಆಗಮಿಸಿದ್ದರು. ಅಲ್ಲಿ ಪರಸ್ಪರ ಸೌಹಾರ್ದದ ಮಾತುಗಳು ನಡೆದವು. ನಾಗರಿಕರಿಗೆ ಮುಸ್ಲಿಂ ಬಾಂಧವರು ಅತ್ಯಂತ ಗೌರವಯುತವಾಗಿ ಸನ್ಮಾನ ಮಾಡಿ, ಭೋಜನವನ್ನು ಮಾಡಿಸಿ ಬೀಳ್ಕೊಟ್ಟರು. ಅಲ್ಲಿಂದ ಅಶೋಕ್ ವೃತ್ತಕ್ಕೆ ಬಂದಾಗ ಹಿಂದೂ ಮಹಾ ಮಂಡಳಿಯವರು ಮೆರವಣಿಗೆಯಲ್ಲಿ ಬರುತ್ತಿರುವ ಮುಸ್ಲಿಂ ಬಾಂಧವರಿಗೆ ಸಿಹಿ ಹಾಗೂ ಉಪಹಾರದ ವ್ಯವಸ್ಥೆ ಮಾಡಿದ್ದರು. ಈ ದೇಶದಲ್ಲಿ ನೂರಾರು ಜಾತಿಗಳಿವೆ, ಹಲವಾರು ಧರ್ಮಗಳಿವೆ. ದೇಶದಲ್ಲಿ ಏಕತೆ ಮೂಡಬೇಕಾದರೆ ನಾವೆಲ್ಲರೂ ಒಂದೇ ಎನ್ನುವ ಭಾವನೆ ನಮ್ಮಲ್ಲಿ ಬರಬೇಕು. ನಾವು ಯಾವುದೇ ಜಾತಿ-ಮತ-ಪಂಥ, ಪಂಗಡಗಳಿಗೆ ಸೇರಿದರೂ ಕೂಡ ನಾವೆಲ್ಲ ಕನ್ನಡಿಗರು, ಭಾರತೀಯರು ಎಂಬ ಭಾವನೆ ಬೆಳೆದು ಬರಬೇಕು.

ರಾಷ್ಟ್ರೀಯತೆಯ ಹೆಸರಿನಲ್ಲಿ ನಡೆಯುತ್ತಿರುವ ದೌರ್ಜನ್ಯಗಳು ಕೂಡ ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತವೆ. ಈ ಸೌಹಾರ್ದದ ಭಾವವನ್ನು ಪಸರಿಸೋಣ. ಈ ಮನೋಧರ್ಮವೇ ರಾಷ್ಟ್ರೀಯ ಮನೋಧರ್ಮವಾಗಲಿ ಎಂದು ಆಶಿಸುತ್ತೇನೆ ಎಂದು ನುಡಿದರು.

ಜಿಲ್ಲಾ ಭ್ರಾತೃತ್ವ ಸಮಿತಿಯ ಮುಖಂಡ ಹಾಗೂ ಜಿಲ್ಲಾ ಫಾಸ್ಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಫಾದರ್ ಚನ್ನಬಸಪ್ಪ ಅಪ್ಪಣ್ಣವರ್ ಮಾತನಾಡಿ, ಈದ್ ಮಿಲಾದ್ ಹಬ್ಬಕ್ಕೆ ನಮ್ಮನ್ನು ಕೂಡ ಆಹ್ವಾನಿಸಿದ್ದರಿಂದ ಭಾಗವಹಿಸಿದೆವು. ಕಾರ್ಯಕ್ರಮದಲ್ಲಿ ಐಕ್ಯತೆಯನ್ನು ನೋಡಲು ಸಾಧ್ಯವಾಯಿತು. ನಾವೆಲ್ಲರೂ ಒಂದೇ ಎನ್ನುವ ರೀತಿಯಲ್ಲಿ ಕೊಪ್ಪಳದ ಯೂಸೂಫಿಯ ಮಸೀದಿಯ ಈದ್ ಮಿಲಾದ್ ಕಾರ್ಯಕ್ರಮದಲ್ಲಿ ನೋಡಲು ಸಾಧ್ಯವಾಯಿತು. ಈದ್ ಮೀಲಾದ್ ಕಾರ್ಯಕ್ರಮ ಮುಗಿಸಿಕೊಂಡು ಬರುವಾಗ, ಅಶೋಕ ವೃತ್ತದಲ್ಲಿ ಈದ್ ಮಿಲಾದ್ ಮೆರವಣಿಗೆಯಲ್ಲಿದ್ದ ಮುಸ್ಲಿಂ ಬಾಂಧವರಿಗೆ ಹಿಂದೂ ಮಹಾ ಮಂಡಳಿ ವತಿಯಿಂದ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದನ್ನು ನೋಡಿದಾಗ ಇನ್ನೂ ಖುಷಿಯಾಯಿತು. ಬಸವಣ್ಣನವರು, ಏಸು ಸ್ವಾಮಿ ಕೂಡ ಇದನ್ನೇ ಇಷ್ಟಪಟ್ಟಿದ್ದರು. ನಾವು ಕೆಳ ಜಾತಿ, ಮೇಲ್ಜಾತಿ ಎಂದು ನೋಡಬಾರದು. ನಾವೆಲ್ಲ ಒಂದೇ ಎಂಬ ಭಾವನೆ ಎಲ್ಲರಲ್ಲೂ ಬರಲಿ, ನಮ್ಮಲ್ಲಿ ಭ್ರಾತೃತ್ವವು ಬೆಳೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ಭ್ರಾತೃತ್ವ ಸಮಿತಿಯ ಜಿಲ್ಲಾ ಸಂಚಾಲಕ ಎಸ್.ಎ ಗಫಾರ್ ಮಾತನಾಡಿ, ನಗರದ ಯುಸೂಫಿಯಾ ಮಸೀದಿಯ ಸಭಾಂಗಣದಲ್ಲಿ ಗುರುವಾರ ನಡೆದ ಪ್ರವಾದಿ ಮುಹಮ್ಮದ್ ಪೈಗಂಬರ್‌ರವರ 1498ನೇ ಜನ್ಮದಿನವನ್ನು ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಧರ್ಮದವರು ಒಟ್ಟುಗೂಡಿ ಸಂವಿಧಾನದ ಆಶಯದಂತೆ ಸೌಹಾರ್ದದಿಂದ ನೆರವೇರಿಸಿದರು. ಅಶೋಕ್ ವೃತ್ತದಲ್ಲಿ ಹಿಂದೂ ಮಹಾ ಮಂಡಳಿಯಿಂದ ಮಿಲಾದ್ ಮೆರವಣಿಗೆಯಲ್ಲಿ ಬಂದ ಮುಸ್ಲಿಮರಿಗೆ ಸಿಹಿ ಹಾಗೂ ಉಪಹಾರದ ವ್ಯವಸ್ಥೆ ಮಾಡಿದ್ದು ಸೌಹಾರ್ದತೆ ಬಿಂಬಿಸುವಂತಿತ್ತು. ನಗರದ ಪ್ರಮುಖ ಬೀದಿಗಳಲ್ಲಿ ನಡೆದ ಮಿಲಾದ್ ಹಬ್ಬದ ಮೆರವಣಿಗೆಯ ಹಿಂದೆ ದಿಡ್ಡಿಕೇರಾ ಓಣಿಯ ಹಝುರತ್ ಖಾಜಾ ಗರೀಬ್ ನವಾಝ್ ಕಮಿಟಿಯವರು ರಸ್ತೆಯುದ್ದಕ್ಕೂ ಬಿದ್ದ ಕಸವನ್ನು ಟ್ರ್ಯಾಕ್ಟರ್‌ನಲ್ಲಿ ಹಾಕುತ್ತಾ ಪ್ರವಾದಿ ಹೇಳಿದ ಸ್ವಚ್ಛತೆ ಕಾಪಾಡಿರುವುದು ಸಂತಸ ತಂದಿದೆ. ಸರ್ವ ಸಮುದಾಯಗಳು ಒಳಗೊಂಡು ಸಂತೋಷ, ನೆಮ್ಮದಿಯಿಂದ ಕೂಡಿ ಬಾಳುವುದೇ ಭ್ರಾತೃತ್ವ ಎಂದು ಹೇಳಿದರು.

# ಸ್ವೀಕೃತ ಅಹವಾಲುಗಳಿಗೆ ಕಾಲಮಿತಿಯೊಳಗೆ ಪರಿಹಾರ

▶▶ಮೊದಲನೇ ಪುಟದಿಂದ



ಸರ್ಕಾರದ ಹಂತದಲ್ಲಿ ನಿರ್ಣಯ ತೆಗೆದುಕೊಳ್ಳುವ ಅಹವಾಲುಗಳು ಮೊದಲ ಹಂತದ್ದಾದರೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹಾಗೂ ಜಿಲ್ಲಾಧಿಕಾರಿಗಳು ನಿರ್ಣಯ ತೆಗೆದುಕೊಳ್ಳುವ ಮೂಲಕ ಪರಿಹಾರ ಕಂಡುಕೊಳ್ಳುವ ಅಹವಾಲುಗಳು ಎರಡನೇ ಹಂತದ್ದಾಗಿರುತ್ತದೆ. ಇನ್ನು ತಾಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಹಂತದಲ್ಲಿ ಅಹವಾಲುಗಳಿಗೆ ಪರಿಹಾರ ನೀಡುವ ಕಾರ್ಯ ಮೂರನೇ ಹಂತದಲ್ಲಿ ಇರಲಿದ್ದು ಈ ಎಲ್ಲ ಹಂತಗಳಲ್ಲಿಯೂ ಸಹ ನಿಗದಿತ ಅವಧಿಯೊಳಗೆ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ದೊರಕಬೇಕಿದೆ ಎಂದರು.

ಜನತಾ ದರ್ಶನದಲ್ಲಿ ಸ್ವೀಕೃತವಾಗುವ ಅಹವಾಲುಗಳ ಹಾಗೂ ಪರಿಹಾರ ನೀಡಿದ ಅಹವಾಲುಗಳ ಸಂಖ್ಯೆಯ ಕುರಿತು ಮಾಸಾಂತ್ಯದ ವೇಳೆಗೆ ಪುಸ್ತಕ ರೂಪದಲ್ಲಿ ಅಂಕಿ ಅಂಶಗಳನ್ನು ನೀಡಲಾಗುವುದು. ಅಲ್ಲದೇ ಸರ್ಕಾರದ ಜನತಾ ದರ್ಶನ ಪೋರ್ಟಲ್‌ನಲ್ಲಿಯೂ ಮಾಹಿತಿ ಪ್ರಕಟಿಸಲಾಗುವುದು. ಪಾರದರ್ಶಕ ಆಡಳಿತ ನೀಡುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಆಡಳಿತಾತ್ಮಕ ಸಮಸ್ಯೆಗಳ ಪರಿಹಾರಕ್ಕೆ ಜನತಾ ದರ್ಶನ ಕಾರ್ಯಕ್ರಮ ಪ್ರಮುಖ ಪಾತ್ರ ವಹಿಸಲಿದೆ ಎಂದು ಸಚಿವ ಎಚ್.ಕೆ ಪಾಟೀಲ ಉಚ್ಚರಿಸಿದರು.

ಸರ್ಕಾರದ ಪ್ರಮುಖ ಐದು ಗ್ಯಾರಂಟಿಗಳಲ್ಲಿ ಈಗಾಗಲೇ ನಾಲ್ಕು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಗದಗ ಜಿಲ್ಲೆಯಲ್ಲಿ ಈ ನಾಲ್ಕೂ ಗ್ಯಾರಂಟಿಗಳನ್ನು ಪ್ರಥಮಾದ್ಯತೆ ಮೇರೆಗೆ ಅನುಷ್ಠಾನಗೊಳಿಸುವ ಮೂಲಕ ಪ್ರತಿ ಗ್ಯಾರಂಟಿ ಯೋಜನೆಯಲ್ಲಿಯೂ ಸಹ ಶೇ.92ರಿಂದ 95ರಷ್ಟು ಗುರಿ ಸಾಧನೆ ಮಾಡಿದೆ. ಈ ಗುರಿ ಸಾಧನೆಯಲ್ಲಿ ಆಡಳಿತ ವರ್ಗದ ಪಾತ್ರ ಪ್ರಮುಖವಾಗಿದೆ ಎಂದರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜನತಾ ದರ್ಶನ ಕಾರ್ಯಕ್ರಮವು ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರದ ವಿನೂತನ ಕಾರ್ಯಕ್ರಮವಾಗಿದೆ. ಸಚಿವರು ಇಂದು ಅಹವಾಲು ಹಿಡಿದು ಬರುವ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ನೀಡಲಿದ್ದಾರೆ. ಸಾರ್ವಜನಿಕರು ಸಮಾಧಾನದಿಂದ, ಯಾವುದೇ ಗೊಂದಲಗಳಿಗೆ ಆಸ್ಪದ ನೀಡದೇ ತಮ್ಮ ಅಹವಾಲುಗಳನ್ನು ಸಲ್ಲಿಸಬೇಕು ಎಂದರು.

ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೇಯಿ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ತಾಲೂಕುಗಳಿಂದ ಅಹವಾಲು ಸಲ್ಲಿಸಲು ಆಗಮಿಸಿದ ಸಾರ್ವಜನಿಕರು, ಗಣ್ಯರು ಹಾಜರಿದ್ದರು.

ನಾಡಗೀತೆಯನ್ನು ಡಾ.ವೆಂಕಟೇಶ ಅಲ್ಕೋಡ ಹಾಗೂ ಸಂಗಡಿಗರು ಪ್ರಸ್ತುತಪಡಿಸಿದರು. ಉಪನ್ಯಾಸಕ ದತ್ತಪ್ರಸನ್ನ ಪಾಟೀಲ ಕಾರ್ಯಕ್ರಮ ನಿರ್ವಹಿಸಿದರು.

# ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ

▶▶ಮೊದಲನೇ ಪುಟದಿಂದ

ಸಚಿವರು ವಿತರಿಸಿದರು. ನರಗುಂದ ತಾಲೂಕಿನ ರುದ್ರವ್ವ ಕುರಿ ಅವರು ಮನೆ ನಿರ್ಮಾಣಕ್ಕೆ ಸಹಾಯ ಧನ ಕೋರಿ ಸಲ್ಲಿಸಿದ ಅಹವಾಲಿಗೆ ಸ್ಪಂದಿಸಿ, ಕೂಡಲೇ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಳಿಗೆ ನಿರ್ದೇಶನ ನೀಡಿದರು. ರೇಣವ್ವ ಮದಗುಣಕಿ ಅವರ ಆಸ್ತಿ ವಿಭಜನೆಗೆ ಸಂಬಂಧಿಸಿದ ಮನವಿಗೆ ಒಂದು ವಾರದೊಳಗೆ ಸಮಸ್ಯೆ ಪರಿಹರಿಸಲಾಗುವದು ಎಂದು ಭರವಸೆ ನೀಡಿದರು.

ಗದಗ ನಗರದ ಶಬಾನಾ ಹೊಸಪೇಟೆ ಅವರು ವಿಧವಾ ವೇತನ ಕುರಿತು ಅಹವಾಲು ಸಲ್ಲಿಸಿದಾಗ, ಸಚಿವರು ಸ್ಥಳದಲ್ಲಿಯೇ ವಿಧವಾ ವೇತನ ಮಂಜೂರಾತಿ ಆದೇಶ ಪ್ರತಿ ವಿತರಿಸಿದರು. ಅಂಧ ಮತ್ತು ಕಿವುಡು ಮಕ್ಕಳ ಶಾಲೆಗೆ ಅಗತ್ಯ ಪಠ್ಯ-ಪುಸ್ತಕಗಳನ್ನು ಪೂರೈಸುವ ಮನವಿಗೆ ಸಂಬಂಧಿಸಿದಂತೆ ಸಚಿವರು, ಮುಂದಿನ ಏಳು ದಿನದೊಳಗಾನೀ ಕೋರಿಕೆಯನ್ನು ಪೂರೈಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಡಂಬಳ ಶಾಲೆಯಲ್ಲಿನ ಶೌಚಾಲಯ ಸಮಸ್ಯೆ ಕುರಿತು ಹಾಗೂ ಶಾಲಾ ಮಕ್ಕಳಿಗಾಗಿ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸುವಂತೆ ಕೋರಿ



ಸಲ್ಲಿಸಿದ ಮನವಿಗೆ ಸಚಿವರು, ಮೂಲಭೂತ ಸಮಸ್ಯೆಗಳ ನಿವಾರಣೆಗೆ ಅಧಿಕಾರಿ ವರ್ಗ ಮುಂದಾಗಬೇಕು ಎಂದರಲ್ಲದೆ, ಸಾರಿಗೆ ಸಂಸ್ಥೆಯಿಂದ ಶಾಲಾ ಮಕ್ಕಳಿಗೆ ನಿಗದಿತ ಅವಧಿಗೆ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು. ಶರಣಪ್ಪ ಎಂಬುವವರು ರೈತರಿಗೆ ಬೆಳೆ ವಿಮೆಗೆ ಜಿಪಿಎಸ್ ಮಾಡುವ ತರಬೇತಿಯನ್ನು ನೀಡಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಎಚ್. ಕೆ ಪಾಟೀಲ, ಒಂದು ವಾರದಲ್ಲಿ ಜಿಪಿಎಸ್ ಮಾಡುವ ಕುರಿತು ರೈತರಿಗೆ ತರಬೇತಿ ನೀಡಲು ಸೂಚಿಸಿದರು.


## ಸಾರ್ವಜನಿಕ ನೋಟಿಸ್

ಈ ಮೂಲಕ ನಾವು ಶ್ರೀ ಬಿ.ಬಿ. ಮಾಗಡಿ, ವಕೀಲರು, ಅನ್ನಪೂರ್ಣೇಶ್ವರಿ ಅಪಾರ್ಟಮೆಂಟ್, ಪಂಚಾಕ್ಷರಿ ನಗರ ಗದಗ ಜಿಲ್ಲಾ: ಗದಗ ನಮ್ಮ ಪಕ್ಷಗಾರರಾದ ರಾಜ ಕುಮಾರ ತಂದೆ ಹನಮಂತಪ್ಪ ಲಕ್ಕುಂಡಿ ಸಾ: ಹೊಂಬಳ, ತಾ. ಗದಗ ಜಿ. ಗದಗ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಪ್ರಕಟಪಡಿಸುವ ಸಾರ್ವಜನಿಕ ನೋಟೀಸು ಏನೆಂದರೆ,

ನಮ್ಮ ಪಕ್ಷಗಾರರು ಗದಗ ತಾಲೂಕಿನ ಹೊಂಬಳ ಗ್ರಾಮದ ಪಂಚಾಯತ ವ್ಯಾಪ್ತಿಯಲ್ಲಿರುವ ಸರ್ವೆ ನಂ. 904/ಬ ಸ್ವತ್ತಿನ ಸಂಖ್ಯೆ: 151400101400120914, ಸದರಿ ಸ್ವತ್ತಿನ ಸಂಖ್ಯೆ (ಗ್ರಾ.ಪಂ. ದಾಖಲೆಗಳ ಪ್ರಕಾರ) ಪ್ಲಾಟ ನಂ. 3989/01/40 ಇದರ ಅಳತೆ ಪೂರ್ವ ಅಳತೆ ಪೂರ್ವ-ಪಶ್ಚಿಮ 10 ಮೀಟರ ಉತ್ತರ-ದಕ್ಷಿಣ 14.40+12.50 ಮೀಟರ ಇದರ ಒಟ್ಟು ಕ್ಷೇತ್ರ 124.50 ಚ. ಮೀಟರ.

ಇದರ ಚಕಬಂದಿ : ಪೂರ್ವಕ್ಕೆ: ಗಾಂವಠಾಣ ಜಾಗ, ಪಶ್ಚಿಮಕ್ಕೆ: 9 ಮೀಟರ ರಸ್ತೆ, ಉತ್ತರಕ್ಕೆ: 9 ಮೀಟರ ರಸ್ತೆ, ದಕ್ಷಿಣಕ್ಕೆ: ಪ್ಲಾಟ ನಂ. 41

ಈ ಮೇಲ್ಕಾಣಿಸಿದ ಚಕಬಂದಿಯ ಮಧ್ಯದಲ್ಲಿರುವ ಆಸ್ತಿಯನ್ನು ಶ್ರೀಮತಿ ಅಂಬಿಕಾ ಕೋಂ. ಅಂಬಾಲಾಲ್ ರಂಗ್ರೇಜಿ ಇವರಿಂದ ನಮ್ಮ ಪಕ್ಷಗಾರರು ಖರೀದಿಪತ್ರ ಮಾಡಿಕೊಳ್ಳುವವರು ಇರುತ್ತಾರೆ. ಕಾರಣ ಮೇಲೆ ಹೇಳಿದ ಆಸ್ತಿಗೆ ಸಂಬಂಧಿಸಿದಂತೆ ಯಾರಾದರೂ ತಂಟೆ ವ ತಕರಾರು, ಹಕ್ಕು, ಹಿತಾಸಕ್ತಿ, ಭೋಜಾ ವಗೈರೆ ಏನಾದರೂ ಇದ್ದರೆ ಈ ನೋಟೀಸ್ ಪ್ರಕಟಿಸಿದ ಏಳು ದಿವಸಗಳ ಒಳಗಾಗಿ ಸಂಬಂಧಪಟ್ಟವರು ಸೂಕ್ತ ದಾಖಲಾತಿಗಳೊಂದಿಗೆ ಬಂದು ತಕರಾರು ಸಲ್ಲಿಸಬೇಕು ಒಂದು ವೇಳೆ ಏಳು ದಿವಸಗಳ ನಂತರ ಬಂದಲ್ಲಿ ಅದು ನಮ್ಮ ಪಕ್ಷಗಾರರಿಗೆ ಬಾಂಧಾಯಿಸುವುದಿಲ್ಲ ಅಂತಾ ಪ್ರಕಟಿಸಿದ ಸಾರ್ವಜನಿಕ ನೋಟೀಸ್.

ಗದಗ, ದಿನಾಂಕ: 30-09-2023

ಸಹಿ/- ಶ್ರೀ ಬಿ.ಬಿ. ಮಾಗಡಿ, ವಕೀಲರು

ಗದಗ. ಮೊ.: 9481931943


# ಅ.2ರಂದು ಹಿರಿಯ ನಾಗರಿಕರಿಗೆ ಆರೋಗ್ಯ ಜಾಗೃತಿ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಅಂತಾರಾಷ್ಟ್ರೀಯ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ವೃದ್ಧರ ಸಮಗ್ರ ಆರೈಕೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಅ. 2ರಂದು ಬೆಳಗ್ಗೆ 10.30ಕ್ಕೆ ಸಿದ್ದರಾಮೇಶ್ವರ ನಗರದ ಆಧ್ಯಾತ್ಮಿಕ ಸಂಸ್ಕೃತಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬ್ರಹ್ಮಕುಮಾರಿ ಜಯಂತಿ ಅಕ್ಕನವರು ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಸ್ಥಾನದ ಮೌಂಟ್ ಆಬೂದಲ್ಲಿ ಹಿರಿಯ ನಾಗರಿಕರ ತಜ್ಞ ಮತ್ತು ಕನ್ನಡಿಗರಾದ ಡಾ. ಮಹೇಶ ಹೇಮಾದ್ರಿ ಅವರು ಹಿರಿಯ ನಾಗರಿಕರಿಗೆ ಜಾಗೃತಿ ಸಂದೇಶ ನೀಡಲಿದ್ದಾರೆ. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಉದ್ಘಾಟಿಸಲಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯ ಥೈಲೆಂಡ್‌ನಲ್ಲಿ ಆಯೋಜಿಸಿದ್ದ ವೃದ್ಧರ ಸಮಗ್ರ ಆರೈಕೆ ಕಾರ್ಯಾಗಾರದಲ್ಲಿ ಡಾ. ಮಹೇಶ ಹೇಮಾದ್ರಿ ಭಾಗವಹಿಸಿದ್ದಾರೆ. ದೇಶಾದ್ಯಂತ ಹಿರಿಯ ನಾಗರಿಕರ ಆರೋಗ್ಯ ಸಂರಕ್ಷಣೆ ವಿಷಯವಾಗಿ ಉಪನ್ಯಾಸ ನೀಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವು ಡಾ. ಹೇಮಾದ್ರಿ ಅವರ ವೃದ್ಧಾಪ್ಯದಲ್ಲಿ ಆರೋಗ್ಯ ನಿರ್ವಹಣೆ ಶೀರ್ಷಿಕೆಯ ಪುಸ್ತಕವನ್ನೂ ಪ್ರಕಟಿಸಿದ್ದಾರೆ. ಸದ್ಯ ಅವರು ಗದಗ ನಗರಕ್ಕೆ ಭೇಟಿ ನೀಡುತ್ತಿದ್ದು, ಹಿರಿಯ ನಾಗರಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕುಮಾರಿ ರೇಖಾ, ಬ್ರಹ್ಮಕುಮಾರಿ ಸಾವಿತ್ರಿ, ಬ್ರಹ್ಮಕುಮಾರಿ ಮಮತಾ ಉಪಸ್ಥಿತರಿದ್ದರು.

# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

▶▶ಮೊದಲನೇ ಪುಟದಿಂದ

ಯೋಜನೆ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ನಿಗಮದ ಅಂತರಜಾಲ https://kmdconline.karnataka.gov.in ಆನ್‌ಲೈನ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಅಕ್ಟೋಬರ್ 3 ರವರೆಗೆ ವಿಸ್ತರಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೌಕರರ ಕುಟುಂಬದ ಸದಸ್ಯರು ಅರಿವು ಸಾಲ ಯೋಜನೆಯನ್ನು ಹೊರತುಪಡಿಸಿ ಇನ್ನುಳಿದ ಯೋಜನೆಗಳಿಗೆ ಅರ್ಹರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08372-295147 ಸಂಪರ್ಕಿಬೇಕೆಂದು ಹಾಗೂ ಜಿಲ್ಲಾ ವ್ಯವಸ್ಥಾಪಕರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತ ಗದಗ ಇವರನ್ನು ಸಂಪರ್ಕಿಸಬಹುದಾಗಿದೆ.

# ಈದ್ ಮಿಲಾದ್ ಅಂಗವಾಗಿ ಮಹಾ ಅನ್ನಸಂತರ್ಪಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಹಣ್ಣು ಮತ್ತು ಕಿರುಕೋಳ ವ್ಯಾಪಾರಿಗಳ ಸಂಘ, ಜನತಾ ಬಜಾರ ಬೀದಿ ಬದಿ ವ್ಯಾಪಾರಿಗಳ ವತಿಯಿಂದ ಹಜರತ್ ಮುಹಮ್ಮದ್ ಪೈಗಂಬರರ ಜನ್ಮದಿನದ ಅಂಗವಾಗಿ ಮಹಾ ಅನ್ನಸಂತರ್ಪಣೆ ನೆರವೇರಿತು.

ಗದಗ ಜಿಲ್ಲಾ ಹಣ್ಣು ಮತ್ತು ಕಿರುಕೋಳ ವ್ಯಾಪಾರಿಗಳ ಸಂಘದ ಅಧ್ಯಕ್ಷ ರಾಜಾಖಾನ್ ಪಠಾನ್, ಗದಗ ಜಿಲ್ಲಾ ಹೂವಿನ ವ್ಯಾಪಾರಿಗಳ ಸಂಘದ ಅಧ್ಯಕ್ಷರು ಮತ್ತು ಗದಗ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಉಮರ್ ಫಾರುಕ್ ಹುಬ್ಬಳ್ಳಿ, ನಾಸವಿ ಕರ್ನಾಟಕದ ರಾಜ್ಯ ಸಂಚಾಲಕ ಅನ್ವರ್ ಶಿರಹಟ್ಟಿ, ಅಮಿನಸಾಬ್ ಧಾರವಾಡ ಮುಂತಾದವರು ಭಾಗವಹಿಸಿದ್ದರು. ಎಂ.ಬಿ ನದಾಫ ವಕೀಲರು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅನ್ವರ್ ಶಿರಹಟ್ಟಿ ಮಾತನಾಡಿ, ಪೈಗಂಬರರು ನೀಡಿದ ಸಂದೇಶದಂತೆ, ಅವರ ಜನ್ಮದಿನದಂದು ಮಹಾ ಅನ್ನಸಂತರ್ಪಣೆ ಕೈಗೊಳ್ಳುವುದು ತುಂಬಾ ಮಹತ್ವದ್ದಾಗಿದೆ ಎಂದರು.

ಪ್ರಮುಖರಾದ ಮಹಮ್ಮದ್ ಎನ್.ಶಾಲಗಾರ, ಇರ್ಷಾದ್ ಮಾನವಿ, ಸಲೀಮ್ ಬಳ್ಳಾರಿ, ಸುಲೇಮಾನ, ಅಶ್ರಫ ಶಿರಹಟ್ಟಿ, ಇಲಿಯಾಸ್ ಇರಕಲ್ಲ, ದಾದಾಪಿರ್ ಕನವಳ್ಳಿ, ಶಾಕೀರ್ ಎಂ.ಶಿರುಂಜಿ, ಆಪ್ರಿಧಿ ತಾಡಪತ್ರಿ, ಅನೀಸ ಲಾಲಕೋಟಿ, ಮಹಮ್ಮದ್ ಯಾಸೀನ್ ಹುಬ್ಬಳ್ಳಿ, ಮೊಹಮ್ಮದ್ ಇಲಿಯಾಸ್ ಹುಬ್ಬಳ್ಳಿ, ಅಬ್ಬಾಸ್ ಚಟನಾಲ್, ಮಲೀಕ್ ಕನವಳ್ಳಿ, ಮುನ್ನಾ ಕನವಳ್ಳಿ, ಸುಲೇಮಾನ ಬಳ್ಳಾರಿ, ಯೂಸುಫ್ ಶಿರಹಟ್ಟಿ, ಹುಸೇನ್ ಕ್ರಾಕ್ಸ್, ಮಹಬೂಬ್ ಬಬರ್ಚಿ, ದಾವಲ್ ಲಾಲಕೋಟಿ, ಸಲೀಂ ಹೊಸೂರ, ಸೋಹೇಲ್, ಪರ್ದಿನ್ ಮನಿಯಾರ, ಬಿಲಾಲ್ ಹುಬ್ಬಳ್ಳಿ, ಅಲ್ತಾಫ ಅತ್ತಾರ, ಸೋಹೇಬ್ ತಾಡಪತ್ರಿ, ತೌಸಿಫ್ ತಾಡಪತ್ರಿ, ಅಜಮತ್ ಆಲದಕಟ್ಟಿ, ಬಾಷಸಾಬ ದೊಡ್ಡಮನಿ, ಇರಫಾನ್ ಮುಳಗುಂದ, ಬಾಷಸಾಬ್ ಬಳ್ಳಾರಿ, ಸಲೀಂ ಬಳ್ಳಾರಿ, ಮಹಮ್ಮದ್‌ಶಫಿ ಅಣ್ಣಿಗೇರಿ, ರಹಿಮಾನಸಾಬ್ ಶಿರಹಟ್ಟಿ, ಇಮಾಮುಹುಸೇನ್ ಡಾಲಾಯತ, ತೌಸಿಫ್ ಪಠಾಣ, ಆಶ್ರಫ್ ಅಬ್ಬಿಗೇರಿ, ಯಾಸಿನ್ ಸಾಲಾರ್, ಯುಮನೂರ ನವನಾರಿ, ಮುಂತಾದವರು ಭಾಗವಹಿಸಿದ್ದರು.

# ಒಂದು ದಿನದ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಗದಗ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಇವರ ಪ್ರಾಯೋಜಕತ್ವದಲ್ಲಿ, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಇವರ ಸಹಯೋಗದಲ್ಲಿ ಆಸಕ್ತ 60 ಜನ ಮಹಿಳೆಯರಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮ ನಗರದ ಮಹೇಶ್ವರಿ ವಿವಿಧೋದ್ದೇಶಗಳ ಮಹಿಳಾ ಮಂಡಳದಲ್ಲಿ ಜರುಗಿತು. ಕಾರ್ಯಕ್ರಮವನ್ನು ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಉಮಾ.ಎಸ್. ಪಾಳೆಗಾರ ಉದ್ಘಾಟಿಸಿ, ಸರ್ಕಾರದಿಂದ ಮಹಿಳೆಯರಿಗಾಗಿ ಈ ತರಹದ ತರಬೇತಿಗಳನ್ನು ಆಯೋಜಿಸಲಾಗಿದೆ, ಈ ತರಬೇತಿಯಲ್ಲಿ ಎಲ್ಲರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀಮತಿ ಜಯಶ್ರೀ. ಬಿ. ಹಿರೇಮಠ ಮಾತನಾಡಿ, ಇಂತಹ ತರಬೇತಿಗಳ ಸದುಪಯೋಗವನ್ನು ಎಲ್ಲ ಮಹಿಳೆಯರು ಪಡೆದು ಆರ್ಥಿಕವಾಗಿ ಸಬಲರಾಗಿ ಮತ್ತು ಉದ್ಯಮಿಗಳಾಗಬೇಕೆಂದು ತಿಳಿಸಿದರು. ಸಿಡಾಕ್ ವತಿಯಿಂದ 2019ರಲ್ಲಿ 6 ದಿನಗಳ ಇ.ಡಿ.ಪಿ. ತರಬೇತಿ ಪಡೆದ ಶಿಬಿರಾರ್ಥಿ ಶ್ರೀಮತಿ ರಶ್ಮಿಕಾ. ಎ. ಹಿರೇಮಠ ಯಶಸ್ವಿ ಉದ್ಯಮಿದಾರರಾಗಿ ಭಾಗವಹಿಸಿದ್ದರು.

ಸಿಡಾಕ್ ಧಾರವಾಡದ ಜಂಟಿ ನಿರ್ದೇಶಕರಾದ ಚಂದ್ರಶೇಖರ. ಎಚ್. ಅಂಗಡಿ ಕಾರ್ಯಕ್ರಮದ ಅದ್ಯಕ್ಷತೆ ವಹಿಸಿ ತರಬೇತಿ ಬಗ್ಗೆ ವಿವರಿಸಿದರು. ಮಂಜುನಾಥ. ಮುಳಗುಂದ, ತರಬೇತುದಾರರು, ಸಿಡಾಕ್ ಗದಗ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ವಿಜಯಲಕ್ಷ್ಮಿ ವಂದಿಸಿದರು. ಗದಗ ಜಿಲ್ಲೆಯ 60 ಮಹಿಳೆಯರು ತರಬೇತಿಯ ಲಾಭ ಪಡೆಯುತ್ತಿದ್ದಾರೆ.

# ಸ್ವಾಭಿಮಾನಿ ಕರವೇ ವತಿಯಿಂದ ರಾಷ್ಟ್ರಪತಿಗಳಿಗೆ ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ತಮಿಳುನಾಡಿಗೆ ಕಾವೇರಿ ನದಿ ನೀರು ಬಿಡುತ್ತಿರುವುದನ್ನು ಖಂಡಿಸಿ ರಾಷ್ಟ್ರಪತಿಗಳಿಗೆ ಗದಗ ಜಿಲ್ಲಾಧಿಕಾರಿಗಳ ಮುಖಾಂತರ ಸ್ವಾಭಿಮಾನಿ ಕರವೇ ಉತ್ತರ ಕರ್ನಾಟಕ ಹಾಗೂ ಗದಗ ಜಿಲ್ಲಾಧ್ಯಕ್ಷ ಎಮ್.ಎ ಕುರ್ತಕೋಟಿ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಎಮ್.ಎ ಕುರ್ತಕೋಟಿ ಮಾತನಾಡಿ, ರಾಜ್ಯದಲ್ಲಿ ಈಗಾಗಲೇ ಬರ ಪರಿಸ್ಥಿತಿ ಇರುವುದು ನಮ್ಮ ರಾಜ್ಯ ಸರಕಾರಕ್ಕೆ ಮನವರಿಕೆ ಇದ್ದರೂ ಸಹ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಿ ತಪ್ಪು ಮಾಡಿದೆ. ಈ ಕೂಡಲೇ ಸದರಿ ವಿಷಯವಾಗಿ ರಾಷ್ಟ್ರಪತಿಗಳ ಮಧ್ಯಸ್ಥಿಕೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಕಾವೇರಿ ಹಾಗೂ ಮಹದಾಯಿ ವಿವಾದಗಳನ್ನು ಬಗೆಹರಿಸಿ ಕರ್ನಾಟಕ ರಾಜ್ಯಕ್ಕೆ ನ್ಯಾಯ ಒದಗಿಸಿಕೊಡಬೇಕೆಂದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಮಿಕ ನಾಯಕ ರಾ.ದೇ ಕಾರಭಾರಿ, ಸಾಮಾಜಿಕ ಕಾರ್ಯಕರ್ತೆ ಮೇರಿ ರಾದೇ ಕಾರಭಾರಿ, ನವೀದಾಬೇಗಂ ಕುರ್ತಕೋಟಿ, ಬೆಟಗೇರಿ ವಿಭಾಗ ಅಧ್ಯಕ್ಷ ಆರೀಫ್ ಕಾತರಕಿ, ಹೊಂಬಳ ಗ್ರಾಮ ಘಟಕಾಧ್ಯಕ್ಷ ಹನೀಪಸಾಬ ಹಾದಿಮನಿ, ಗೌರವಾಧ್ಯಕ್ಷ ಅಲಿ ಅಕಬರ, ಮಾಬುಸಾಬ ಪಕಿರಸಾಬ ಗುದಗನೂರ, ಯಮನೂರಿ ಭಿಂಗಿ, ಇಮ್ರಾನ ಕಲೆಗಾರ, ಇಕ್ಬಾಲಸಾಬ್ ಬೆಳಗಾಂ ಮುಂತಾದವರು ಉಪಸ್ಥಿತರಿದ್ದರು.

# ತಮಿಳುನಾಡಿಗೆ ಕಾವೇರಿ ನೀರು ಹರಿಸಿದರೆ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಗದಗ

ಈಗಾಗಲೇ ನಮ್ಮ ರಾಜ್ಯದಲ್ಲಿ ಕೆಲವು ಜಿಲ್ಲೆಗಳು ಹಾಗೂ ತಾಲ್ಲೂಕುಗಳಲ್ಲಿ ಮಳೆಯಾಗದೇ ಇರುವುದರಿಂದ ರೈತರು ಸಾಕಷ್ಟು ತೊಂದರೆಯನ್ನು ಎದುರಿಸುತ್ತಿದ್ದಾರೆ. ಹೀಗಿರುವಾಗ, ಬೇರೆ ರಾಜ್ಯ-ಕ್ಕೆ ನೀರು ಕೊಡಲು ಸಿದ್ಧರಿಲ್ಲ. ರಾಜ್ಯದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ, ನಮ್ಮ ರಾಜ್ಯದ ರೈತರಿಗೆ ಹಾಗೂ ಸಾರ್ವಜನಿಕರಿಗೆ ನೀರಿನ ತೊಂದರೆ



ಆಗದಂತೆ ನೋಡಿಕೊಳ್ಳಬೇಕೆಂದು ಜಯ ಕರ್ನಾಟಕ ಜನಪರ ವೇದಿಕೆ ರಾಜ್ಯ ಉಪಾಧ್ಯಕ್ಷ ಹಾಲಪ್ಪ ವರವಿ ಒತ್ತಾಯಿಸಿದ್ದಾರೆ.

ಒಂದು ವೇಳೆ ತಮಿಳುನಾಡಿಗೆ ನೀರು ಬಿಡುವುದನ್ನು ಕೂಡಲೇ ನಿಲ್ಲಿಸದಿದ್ದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜಯ ಕರ್ನಾಟಕ ಜನಪರ ವೇದಿಕೆಯ ವತಿಯಿಂದ ಮುಂಬರುವ ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದ ಎಲ್ಲ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಉಗ್ರವಾದ ಹೋರಾಟ ಮಾಡಲಾಗುವದೆಂದು ಪತ್ರಿಕಾ ಪ್ರಕಟಣೆಯ ಮೂಲಕ ಎಚ್ಚರಿಸಿದ್ದಾರೆ.

# ಕರ್ನಾಟಕ ಬಂದ್ ಬೆಂಬಿಲಿಸಿ ಕರವೇ ಪ್ರತಿಭಟನೆ



■ವಿಜಯಸಾಕ್ಷಿ ಸುದ್ದಿ, ಗದಗ

ಕಾವೇರಿ ನೀರು ವಿವಾದವಾಗಿ ಶುಕ್ರವಾರ ವಿವಿಧ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್ ಬೆಂಬಲಿಸಿ ನಗರದಲ್ಲಿ ಕರವೇ ಜಿಲ್ಲಾಧ್ಯಕ್ಷ ದಾವಲಸಾಬ್ ಮುಳುಗುಂದ್ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಕರವೇ ಕಾರ್ಯಕರ್ತರು ನಗರದ ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ದಾವಲಸಾಬ್ ಮುಳುಗುಂದ್, ಶಿರಹಟ್ಟಿ ತಾಲೂಕು ಅಧ್ಯಕ್ಷ ರಫೀಕ ಕೇರಿಮನಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಕರವೇ ಕಾರ್ಯಾಧ್ಯಕ್ಷ ವೆಂಕಟೇಶ್ ಬೇಲೂರ್, ಜಿಲ್ಲಾ ಪ್ರ. ಕಾರ್ಯದರ್ಶಿ ಶ್ರೀನಿವಾಸ್ ಭಂಡಾರಿ, ಜಿಲ್ಲಾ ಕಾರ್ಯದರ್ಶಿ ಸಹದೇವ್ ಕೋಟಿ, ಜಿಲ್ಲಾ ಸಂಘಟನಾ ಕಾರ್ಯಾದರ್ಶಿ ತಿಪ್ಪಣ್ಣ ಕುಂಚಗೇರಿ, ಜಿಲ್ಲಾ ಯುವ ಘಟಕಾಧ್ಯಕ್ಷ ಮಣಿಕಂಠ ಭಂಡಾರಿ, ಶಿರಹಟ್ಟಿ ಕಾರ್ಯಾಧ್ಯಕ್ಷ ಗೌಸ್ ಕಲಾವಂತ್, ಗದಗ ತಾಲೂಕಾಧ್ಯಕ್ಷ ಪರಶುರಾಮ್ ಬಂಕದಮನಿ, ಪ್ರಮುಖರಾದ ಬಸವರಾಜ ಕೆ. ಹೂಗಾರ, ಮಣಿಕಂಠ ಶ್ರೀನಿವಾಸ ಭಂಡಾರಿ, ಚನ್ನಬಸನಗೌಡ ತಮ್ಮನಗೌಡ್ರ, ಶಂಕರ ಪಾಂಡಪ್ಪ ದಹಿಂಡೆ, ಸುನೀಲ ಬಾಡಗಿ, ಸಂದೀಪ ಎಮ್., ವೀರಪ್ಪ ಕಳಕಪ್ಪ ವಗ್ಗರಿ, ಮಹಾಂತೇಶ ಹಿರೇಮಠ, ಬಸಪ್ಪ ಮಾದರ, ರಫೀಕ ಕೆರೆಮನಿ, ಗೌಸಸಾಬ ಕಲಾವಂತ, ಈರಣ್ಣ ಬಾಗೇವಾಡಿ, ಸಿದ್ದಪ್ಪ ಮುದ್ಲಾಪುರ್, ಗವಿಸಿದ್ದಪ್ಪ ಆಲೂರ, ಹೊಳೆಯಪ್ಪ ಜುಮ್ಮನ್ನವರು, ಶಂಕ್ರಪ್ಪ ಕದರಗಟ್ಟಿ ಹಾಗೂ ಸಮಸ್ತ ಕರವೇ ಕಾರ್ಯಕರ್ತರು ಹಾಜರಿದ್ದರು.

# 'ಮರುಳಶಂಕರದೇವರು' ಕೃತಿಗೆ ಡಾ. ಪಂ.ಪುಟ್ಟರಾಜ ಸಾಹಿತ್ಯ ಪುರಸ್ಕಾರ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ಡಾ. ಪಂ. ಪುಟ್ಟರಾಜ ಗುರುವರ್ಯರ ಸಾಹಿತ್ಯ ಸೇವಾ ಸ್ಮರಣೆಗಾಗಿ ಕೊಡಮಾಡುವ 'ಡಾ. ಪಂ. ಪುಟ್ಟರಾಜ ಸಾಹಿತ್ಯ ಪುರಸ್ಕಾರ' ರಾಜ್ಯ ಪ್ರಶಸ್ತಿಗೆ ಡಾ. ದಯಾನಂದ ನೂಲಿ ಇವರ 'ಮರುಳಶಂಕರದೇವರು ಅನುಭಾವ ಯಾತ್ರೆ' ಕೃತಿ ಆಯ್ಕೆಯಾಗಿದೆ ಎಂದು ಸೇವಾ ಸಮಿತಿಯ ಬೆಳಗಾವಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಿದ್ಯಾ ಮಗದುಮ ಗೋಕಾಕ ಇವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.



ಅಕ್ಟೋಬರ್ 1ರಂದು ಬೆಳಗಾವಿಯ ಸರಸ್ವತಿ ವಾಚನಾಲಯದಲ್ಲಿ ಹಮ್ಮಿಕೊಂಡಿರುವ 'ಪದ್ಮಭೂಷಣ' ಡಾ. ಪಂ. ಪುಟ್ಟರಾಜ ಗುರು ಭಕ್ತಿ ಸಾಹಿತ್ಯೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಪೂಜ್ಯಶ್ರೀ ಮ.ನಿ.ಪ್ರ. ಗುರುಸಿದ್ಧ ಮಹಾಸ್ವಾಮಿಗಳು ಕಾರಂಜಿ ಮಠ ಬೆಳಗಾವಿ ಪೂಜ್ಯರ ದಿವ್ಯ ಸಾನ್ನಿಧ್ಯದಲ್ಲಿ ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಡಾ. ಪಂ. ಪುಟ್ಟರಾಜ ಸಾಹಿತ್ಯ ಪುರಸ್ಕಾರ ರಾಜ್ಯ ಪ್ರಶಸ್ತಿ ಆಯ್ಕೆಗಾಗಿ ರಾಜ್ಯಾಧ್ಯಕ್ಷರಾದ ವೇ. ಚನ್ನವೀರ ಸ್ವಾಮಿ ಹಿರೇಮಠ ಇವರ ನೇತೃತ್ವದಲ್ಲಿ, ನಿವೃತ್ತ ಪ್ರಾಚಾರ್ಯ ಡಾ. ಅನ್ನದಾನಿ ಹಿರೇಮಠ, ನಿವೃತ್ತ ಪ್ರಾಧ್ಯಾಪಕಿ ಡಾ. ಶಕುಂತಲಾ ಸಿಂಧೂರ, ಉಪನ್ಯಾಸಕಿ ಡಾ. ರಶ್ಮಿ ಅಂಗಡಿ, ಮಕ್ಕಳ ಸಾಹಿತಿ ಡಾ. ತಯಬಲಿ ಹೊಂಬಳ ಮತ್ತು ಸೇವಾ ಸಮಿತಿಯ ಎಫ್.ಎ ಹಿರೇಮಠ ಇವರುಗಳನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು ವಿದ್ಯಾ ಸೋಮಶೇಖರ ಮಗದುಮ ತಿಳಿಸಿದ್ದಾರೆ.

# ಖಬರಸ್ಥಾನದ ವಿವಿಧ ಕಾಮಗಾರಿಗಳಿಗೆ ಚಾಲನೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ ವತಿಯಿಂದ ಡಂಬಳ ನಾಕಾ ಸ್ಮಶಾನದಲ್ಲಿ (ಖಬರಸ್ಥಾನ) ಶುಕ್ರವಾರ ವಿದ್ಯುತ್ ಕಂಬಗಳು, ವಿದ್ಯುತ್ ದೀಪ, ಇಂಟರ್‌ಲಾಕ್, ರಸ್ತೆ ಕಾಮಗಾರಿಗಳಿಗೆ ನಗರಸಭೆಯ ವಿರೋಧ ಪಕ್ಷದ ಉಪನಾಯಕ ಬರಕತಅಲಿ ಮುಲ್ಲಾ ನೇತೃತ್ವದಲ್ಲಿ ಚಾಲನೆ ನೀಡಲಾಯಿತು.

ನಗರಸಭೆಯ ಸದಸ್ಯರಾದ ಜೀವನಸಾಬ ನಮಾಜಿ, ಚಿಮ್ಮಿ ನದಾಫ್, ಇಮ್ತಿಯಾಜ್ ಶಿರಹಟ್ಟಿ, ಮುನ್ನಾ ರೇಶ್ಮಿ, ಅಬ್ದುಲ್ ಮುನಾಫ್ ಮುಲ್ಲಾ ಹಾಗೂ ವಕ್ಫ ಬೋರ್ಡ್ ಮಾಜಿ ಅಧ್ಯಕ್ಷ ಜಿ.ಎಂ ದಂಡಿನ ಇವರ ಸಹಯೋಗದೊಂದಿಗೆ, ಮೌಲಾನಾ ಎಂ.ಎ ಶೇಖ್ ಅವರ ಖುರಾನ್ ಪಠಣದೊಂದಿಗೆ ಚಾಲನೆ ನೀಡಲಾಯಿತು.

ಈ ಸಂರ್ಭದಲ್ಲಿ ಸಮಾಜದ ಹಿರಿಯರಾದ ಜಾಮೀಯಾ ಮಸ್ಜಿದ್ ಚೇರಮನ್ ಸಾದಿಕ್ ನರಗುಂದ, ನಿರ್ದೇಶಕ ಅಕಬರ್‌ಸಾಬ ಬಬರ್ಚಿ, ಅಬ್ದುಲ್ ರಶೀದ್ ಮದರಂಗಿ, ಆಸೀಫ್ ಮುಲ್ಲಾ, ಹುಸೇನಬಾಬ ಹುಯಿಲಗೋಳ, ಹಾಜಿ ಅಹಮದ್ ಮುಜಾವರ, ಹಾಜಿ ಜೆ.ಎ ಡಂಬಳ, ಬಶೀರ್ ತಾಳಿಕೋಟಿ, ಮೋದಿನ್‌ಸಾಬ್ ಶಿರಹಟ್ಟಿ, ಸಮದ್ ಮುಜಾವರ್, ಮೆಹಬೂಬ್‌ಸಾಬ್ ಅಡ್ರಕಟ್ಟಿ, ಆಸೀಫ್ ನರಗುಂದ, ಹಾಜಿ ದಖನಿ, ಬಾಬುಸಾಬ ಯಾಲಿಗಾರ ಹಾಗೂ ನಗರಸಭೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## 'ನಮ್ಮ ಕ್ಲಿನಿಕ್' ಕಾರ್ಮಿಕ ವರ್ಗಕ್ಕೆ ಅನುಕೂಲವಾಗಿಸುವ ನಿಟ್ಟಿನಲ್ಲಿ ಡಿಎಚ್‌ಓ ಸಲಹೆ

# ಆಸ್ಪತ್ರೆಗಳ ಕಾರ್ಯನಿರ್ವಹಣೆ ಸಮಯ ಬದಲಾವಣೆ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ರಾಜ್ಯ ಸರಕಾರ ಜಿಲ್ಲೆಯಲ್ಲಿ ಕಳೆದ ವರ್ಷದಿಂದ ಆರಂಭಿಸಿರುವ 'ನಮ್ಮ ಕ್ಲಿನಿಕ್' ಆಸ್ಪತ್ರೆ ಪೈಕಿ ಧಾರವಾಡ ಮದಿಹಾಳದ ಮತ್ತು ಹುಬ್ಬಳ್ಳಿ ಎಸ್.ಎಂ ಕೃಷ್ಣಾ ನಗರದ ಆಸ್ಪತ್ರೆಗಳ ಕಾರ್ಯನಿರ್ವಹಣೆ ಅವಧಿಯನ್ನು ಕೂಲಿ ಕಾರ್ಮಿಕರ, ಸಾರ್ವಜನಿಕರ ಅನುಕೂಲಕ್ಕಾಗಿ ಬದಲಾವಣೆ ಮಾಡಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದರಿಂದ ಈ ಎರಡು ನಮ್ಮ ಕ್ಲಿನಿಕ್‌ಗಳ ಕಾರ್ಯ ನಿರ್ವಹಣೆಯ ಸಮಯ ಬದಲಾವಣೆ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಪಾಟೀಲ ಶಶಿ ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ರಾಜ್ಯ ಸರಕಾರವು ಧಾರವಾಡದಲ್ಲಿ ಎರಡು, ಹುಬ್ಬಳ್ಳಿಯಲ್ಲಿ ಎರಡು ಮತ್ತು ನವಲಗುಂದ ಹಾಗೂ ಅಣ್ಣಿಗೇರಿ ಪಟ್ಟಣದಲ್ಲಿ ತಲಾ ಒಂದು ಸೇರಿ ಧಾರವಾಡ ಜಿಲ್ಲೆಯಲ್ಲಿ ಒಟ್ಟು 6 ನಮ್ಮ ಕ್ಲಿನಿಕ್ ಆಸ್ಪತ್ರೆಗಳು ನಡೆಯುತ್ತಿವೆ.

> ಜಿಲ್ಲೆಯ ನಮ್ಮ ಕ್ಲಿನಿಕ್ ಆಸ್ಪತ್ರೆಗಳಲ್ಲಿ ಜನರಲ್ ಓಪಿಡಿ, ಲ್ಯಾಬ್ ಟೆಸ್ಟ್, ಉಚಿತ ಔಷಧಿ ವಿತರಣೆ ಹಾಗೂ ವಾರದಲ್ಲಿ ಎರಡು ದಿನ ಯೋಗ ಹಾಗೂ ಉತ್ತಮ ಆರೋಗ್ಯ ಹವ್ಯಾಸಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ನಮ್ಮ ಕ್ಲಿನಿಕ್‌ಗಳ ಬಗ್ಗೆ ಸಾರ್ವಜನಿಕರ ಸ್ಪಂದನೆ ಉತ್ತಮವಾಗಿದೆ ಎಂದು ಡಿಎಚ್‌ಓ ಡಾ.ಪಾಟೀಲ ಶಶಿ ತಿಳಿಸಿದ್ದಾರೆ.

ಅಣ್ಣಿಗೇರಿ, ನವಲಗುಂದ, ಹುಬ್ಬಳ್ಳಿಯ ಬೈರಿದೇವರಕೊಪ್ಪ ಮತ್ತು ಧಾರವಾಡದ ಲಕ್ಷ್ಮೀಸಿಂಗನಕೇರಿಯಲ್ಲಿ ಆರಂಭಿಸಿರುವ ನಮ್ಮ ಕ್ಲಿನಿಕ್ ಆಸ್ಪತ್ರೆಗಳು ಬೆಳಿಗ್ಗೆ 9ರಿಂದ ಸಂಜೆ 4.30ರ ವರೆಗೆ ಕಾರ್ಯನಿರ್ವಹಿಸುತ್ತವೆ. ಧಾರವಾಡ ಮದಿಹಾಳದ ಮತ್ತು ಹುಬ್ಬಳ್ಳಿ ಎಸ್.ಎಂ ಕೃಷ್ಣಾ ನಗರದ ನಮ್ಮ ಕ್ಲಿನಿಕ್ ಆಸ್ಪತ್ರೆಗಳು ಸೆ.27ರಿಂದ ಮುಂದಿನ ದಿನಗಳಲ್ಲಿ ಬೆಳಿಗ್ಗೆ 8ರಿಂದ 12 ಗಂಟೆಯವರೆಗೆ ಹಾಗೂ ಸಂಜೆ 4ರಿಂದ 8 ಗಂಟೆವರೆಗೆ ಕಾರ್ಯನಿರ್ವಹಿಸಲಿವೆ. ಚಿಕಿತ್ಸೆ ಅಗತ್ಯವಿರುವ ನಾಗರಿಕರೊಂದಿಗೆ ಕೂಲಿಕಾರ್ಮಿಕರಿಗೆ, ಕೃಷಿ ಕಾರ್ಮಿಕರಿಗೆ, ದಿನಗೂಲಿ ನೌಕರರಿಗೆ ಅಗತ್ಯ ಆರೋಗ್ಯ ಸೌಲಭ್ಯ ಮತ್ತು ಚಿಕಿತ್ಸೆಗೆ ಅನುಕೂಲವಾಗುವಂತೆ ಸರಕಾರದ ನಿರ್ದೇಶನದಂತೆ ಬದಲಾವಣೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.



# ಸುನೀಲ ದಾಮೋದರರಿಗೆ 'ವಿಠ್ಠಲ ಶ್ರೀ' ಪ್ರಶಸ್ತಿ

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ಬೆಳಗಾವಿಯ ಸಂಕಲ್ಪ ಕ್ರೀಡಾ ಮತ್ತು ಸಮಾಜ ಸೇವಾ ಸಂಘದಿಂದ ನಾಮದೇವ ಶಿಂಪಿ ಮತ್ತು ಭಾವಸಾರ ಕ್ಷತ್ರೀಯ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವ್ಯಕ್ತಿಗೆ ಕೊಡಮಾಡುವ ರಾಜ್ಯ ಮಟ್ಟದ 'ವಿಠ್ಠಲ ಶ್ರೀ' ಪ್ರಶಸ್ತಿಗೆ ಯುವ ಸಿತಾರ್ ವಾದಕ ಸುನೀಲ ದಾಮೋದರ ಆಯ್ಕೆಯಾಗಿದ್ದಾರೆ.



ಹಲವಾರು ವರ್ಷಗಳ ಸಂಗೀತ ಸಾಧನೆಯನ್ನು ಗುರುತಿಸಿ ಇವರಿಗೆ ಅಕ್ಟೋಬರ್ 1ರಂದು ಬನವಾಸಿಯ ನಾಮದೇವ ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವದು ಎಂದು ಆಯ್ಕೆ ಸಮಿತಿಯ ಕಾರ್ಯದರ್ಶಿ ಮಂಜುನಾಥ ರೇಳೇಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಾಲೂಕು ಮಟ್ಟದ ಪೋಷಣ್ ಮಾಸಾಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಮುಳಗುಂದ ವಲಯದ ಚಿಂಚಲಿ ಗ್ರಾಮದಲ್ಲಿ ಗದಗ ತಾಲೂಕಾಡಳಿತ, ತಾ.ಪಂ ಗದಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಇಲಾಖೆ, ಆಯುಷ್ ಇಲಾಖೆ, ಗ್ರಾಮ ಪಂಚಾಯಿತಿ ಚಿಂಚಲಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ತಾಲೂಕು ಮಟ್ಟದ ಪೋಷಣ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿರ್ಮಲಾ ಅರಮನಿ ವಹಿಸಿದ್ದರು. ಚಿಂಚಲಿ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಅಶೋಕ್ ಕಂಬಿ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಂಜುಳಾ ಕಾಮತಗಿ, ಮೇಲ್ವಿಚಾರಕರಾದ ಗೀತಾ ದ್ಯಾಪನಗೌಡರ, ಚಿಂಚಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸುಧಾ, ಗ್ರಾ.ಪಂ ಮಾಜಿ ಉಪಾಧ್ಯಕ್ಷೆ ರೂಪಾ ಕುರಬರ, ಬಾಲ ವಿಕಾಸ ಸಮಿತಿ ಚಿಂಚಲಿಯ ಫರಿಧಾ ನದಾಫ ಪಾಲ್ಗೊಂಡರು.

ಶಿಕ್ಷಕಿಯರಾದ ಭುವನೇಶ್ವರಿ, ಸುನೀತಾ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಈದ್ ಮಿಲಾದ್ ಕಮಿಟಿಯಿಂದ ಪ್ರವಾದಿ ಪೈಗಂಬರ ಜಯಂತಿ ಆಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಉರ್ದು ಸೆಂಟ್ರಲ್ ಸ್ಕೂಲ್ ನಂ.2ರಲ್ಲಿ ಪ್ರವಾದಿ ಪೈಗಂಬರರ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಮಾಜಿ ಶಾಸಕ ಡಿ.ಆರ್ ಪಾಟೀಲರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಭಾಷಾಸಾಬ ಮಲ್ಲಸಮುದ್ರ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಕ್ಬರಸಾಬ ಬಬರ್ಚಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಮುಖರಾದ ಮಹಮ್ಮದ ಯೂಸೂಫ ನಮಾಜಿ, ಪೀರಸಾಬ ಕೌತಾಳ, ವಾಸಣ್ಣ ಕುರಡಗಿ, ಸಿದ್ದು ಪಾಟೀಲ, ಪ್ರಭು ಬುರಬುರೆ, ಎಸ್.ಎನ್ ಬಳ್ಳಾರಿ, ರಾಮಣ್ಣ ಪಲದೊಡ್ಡಿ, ಸಚಿನ ಪಾಟೀಲ, ಐ.ಬಿ ದಾವಲ್, ಸಾದಿಕ ನರಗುಂದ, ಮಕಬುಲ ಶಿರಹಟ್ಟಿ, ಅಬ್ದುಲ ರೆಹಮಾನ ರಾಟಿ, ಎಂ.ಐ ನವಲೂರ, ಶಿರಾಜ ಬಳ್ಳಾರಿ, ಗುರಣ್ಣಾ ಬಳಗಾನೂರ, ಬಾಬಾಜಾನ ಬಳಗಾನೂರ, ಫಾರೂಕ ಹುಬ್ಬಳ್ಳಿ, ಮೌಲ್ವಿ, ವಿಜಯಕುಮಾರ ಮುಳಗುಂದ, ರಮೇಶ ಮುಳಗುಂದ, ರಫೀಕ ಜಮಾಲಖಾನ, ಎಂ. ಸಾಲಗಾರ, ಮೆಹಬೂಬ ನದಾಫ, ಜುನಸಾಬ ನಮಾಜಿ, ಮಹಮ್ಮದಶಫೀ ಕುದರಿ, ಬರಕತಅಲಿ ಮುಲ್ಲಾ, ಮುನ್ನಾ ರೇಶ್ಮಿ, ಅಬ್ದುಲ್ ಮುನಾಫ ಮುಲ್ಲಾ, ಇಮ್ತಿಯಾಜ್ ಶಿರಹಟ್ಟಿ, ಅಶೋಕ ಮಂದಾಲಿ, ಇರ್ಫಾನ ಡಂಬಳ, ಅಬುಬಕರ ಅಣ್ಣಿಗೇರಿ, ಸೈಯ್ಯದ ಖಾಲಿದ ಕೊಪ್ಪಳ, ರಶೀದ ಮದರಂಗಿ, ಮಕ್ತುಮಸಾಬ ನಾಲಬಂದ, ಜಹೀರ ತಾಡಪತ್ರಿ, ಕಿರಣ ಭೂಮಾ, ಶಿವಣ್ಣ ಬಳ್ಳಾರಿ, ಚಂದ್ರಕಾಂತ ಚವ್ಹಾಣ, ಜಹಾಂಗೀರ ಮುಳಗುಂದ, ಅಬ್ದುಲ್‌ರಜಾಕ ಸೂಡಿ, ತೌಸಿಫ ನರಗುಂದ, ಸಲ್ಮಾನ ಬನ್ನೂರ, ರಫೀಕ ಧಾರವಾಡ, ಸೋಹಿಲ ಕೊಟ್ಟೂರ, ಶಾದಾಬ್ ಮುಲ್ಲಾ, ಶಾಬಾಜ್ ಮುಲ್ಲಾ, ಅಬ್ದುಲ್ ಕರೀಮ್, ಜುನೇದ ಉಮಚಗಿ, ಇರ್ಫಾನ ಬಬರ್ಚಿ, ಸಲೀಮ ಮುಂಡರಗಿ, ಫೈಜಾನ್, ರಹೀಮ್ ಮುಧೋಳ, ಅಕ್ಬರ ಅಕ್ಕಿ, ಇರ್ಫಾನ ಕಾಗದಗಾರ, ಯೂಸೂಫ ಶಿರೋಳ, ಸಲೀಮ ಕಾಗದಗಾರ ಉಪಸ್ಥಿತರಿದ್ದರು.

# ಭಗತ್ ಸಿಂಗ್‌ರ 116ನೇ ಜನ್ಮದಿನಾಚರಣೆ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದಲ್ಲಿ ಭಗತ್ ಸಿಂಗ್ ಯುವ ಸೇನೆ ವತಿಯಿಂದ ಕ್ರಾಂತಿಕಾರಿ ನಾಯಕ ಭಗತ್ ಸಿಂಗ್ ಅವರ 116ನೇ ಜನ್ಮದಿನಾಚರಣೆಯನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಈಚೆಗೆ ಆಚರಿಸಲಾಯಿತು.

ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಗತ್ ಸಿಂಗ್‌ರ ಭಾವಚಿತ್ರದ ಮೆರವಣಿಗೆಯು ಶ್ರೀ ಅನ್ನದಾನೇಶ್ವರ ಮಠದಿಂದ ಶ್ರೀ ಕಲ್ಮೇಶ್ವರ ದೇವಸ್ಥಾನದವರೆಗೆ ನಡೆಯಿತು. ಮೆರವಣಿಗೆಯಲ್ಲಿ ನಾಗರಾಜ ಕಡಗದ, ಮಂಜುನಾಥ ವಾಲಿ, ಮಂಜುನಾಥ ದೊಡ್ಡಮೇಟಿ, ಆನಂದ ಕೊಪ್ಪದ, ಅಂದಾನಪ್ಪ ಬಳಗೇರ, ವಿನಾಯಕ ಗಾಣಿಗೇರ, ಬಸವರಾಜ ಮಾರನಬಸರಿ, ಶಿವು ಹಾಳಕೇರಿ, ಅಕ್ಷಯ್ ಸತ್ತಿಗೇರಿ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಶರಣ ಸಾಹಿತ್ಯ ಪರಿಷತ್ ಸರ್ವ ಸದಸ್ಯರ ಸಭೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ಇದರ 29ನೇ ಸರ್ವ ಸದಸ್ಯರ ಸಭೆಯನ್ನು ಭಾನುವಾರ ಮುಂಜಾನೆ 10.30 ಗಂಟೆಗೆ ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಮಂಟಪ, ಗದಗ ಇಲ್ಲಿ ಕರೆಯಲಾಗಿದೆ.

ಪರಿಷತ್ತಿನ ಗೌರವಾಧ್ಯಕ್ಷರುಗಳಾದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮತ್ತು ಪೂಜ್ಯ ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಈ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಅಪ್ಪಾರಾವ ಅಕ್ಕೋಣಿ ವಹಿಸಲಿದ್ದಾರೆ. ಕಾರಣ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರು ಸಭೆಗೆ ತಪ್ಪದೇ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಸಂಘಟಕರ ಪರವಾಗಿ ಚೆನ್ನಬಸಪ್ಪ ಕಂಠಿ, ಡಾ. ಆರ್.ಎಸ್ ದಾನರಡ್ಡಿ, ಪ್ರಕಾಶ ಅಸುಂಡಿ ವಿನಂತಿಸಿದ್ದಾರೆ.

# ಉಚಿತ ಶೂ-ಸಾಕ್ಸ್ ವಿತರಣೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದ ಶ್ರೀ ಅಂದಾನಪ್ಪ ಜ್ಞಾನಪ್ಪ ದೊಡ್ಡಮೇಟಿ ಸರಕಾರಿ ಪ್ರೌಢಶಾಲೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಮಕ್ಕಳಿಗೆ ಉಚಿತವಾಗಿ ಕೊಡಮಾಡುವ ಶೂ ಹಾಗೂ ಸಾಕ್ಸ್‌ಗಳನ್ನು ಶುಕ್ರವಾರ ವಿತರಿಸಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷೆ ಸುಜಾತ ಕಮ್ಮಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ಬಿ.ಆರ್ ಗದುಗಿನ, ಎಸ್‌ಡಿಎಂಸಿ ಸದಸ್ಯ ಸಂಗಮೇಶ ಮೆಣಸಗಿ, ಶಿಕ್ಷಕರಾದ ವಿ.ವಿ ಅಣ್ಣಿಗೇರಿ, ಸಿ.ವಿ ಅಂಬಿಗೇರ, ನೆಹರು ಮನೋಳ್ಳಿ, ಯು.ಎಸ್ ಕಣವಿ, ಡಿ.ಎಸ್ ಆಲಮೇಲ, ಗೌರಮ್ಮ, ದೀಪಾ ತುಕ್ಕೋಜಿ ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.



VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka